# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಜನವರಿ 12, 2022

ಸಂಪುಟ : 48 ಸಂಚಿಕೆ : 242 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




## ಕುಸ್ತಿಯಿಂದ ಸದೃಢ ದೇಹ, ಆರೋಗ್ಯ ಸಾಧ್ಯ

**ಹರಿಹರದಲ್ಲಿ ಎರಡು ದಿನಗಳ ಕುಸ್ತಿ ಪಂದ್ಯಾವಳಿಗೆ ಕಾಗಿನೆಲೆ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಚಾಲನೆ**

ಹರಿಹರ, ಜ.19 - ಕುಸ್ತಿಯಿಂದ ದೇಹ ಸದೃಢಗೊಳ್ಳುವದರ ಜೊತೆಗೆ ಉತ್ತಮ ಆರೋಗ್ಯ ಹಾಗೂ ಮಾನಸಿಕ ನೆಮ್ಮದಿ ಗಳಿಸಬಹುದು ಎಂದು ಕಾಗಿನಲೆ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ನಗರದ ಗಾಂಧಿ ಮೈದಾನದಲ್ಲಿ ರಾಜ್ಯ ಕುಸ್ತಿ ಸಂಘ ಮತ್ತು ಹರಿಹರದ ಕುಸ್ತಿ ಜೀರ್ಣೋದ್ಧಾರ ಸಮಿತಿ ವತಿಯಿಂದ ಆಯೋಜಿಸಿರುವ ಎರಡು ದಿನಗಳ ಹೊನಲು ಬೆಳಕಿನ ಕುಸ್ತಿ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು. ಶ್ರೀ ಹರಿಹರೇಶ್ವರ ದೇವಾಲಯದ ಆವರಣದಿಂದ ಮೈದಾನಕ್ಕೆ ಕ್ರೀಡಾ ಜೋತಿಯನ್ನು ಅದ್ದೂರಿ ಮೆರವಣಿಗೆ ಮೂಲಕ ತರಲಾಗಿತ್ತು.

ದೇಶದಲ್ಲಿ ಕುಸ್ತಿ ಕ್ರೀಡೆಗೆ ತನ್ನದೇ ಆದ ಇತಿಹಾಸವಿದೆ. ರಾಜ ಮಹಾರಾಜರ ಕಾಲದಲ್ಲಿ ಕುಸ್ತಿ ಕ್ರೀಡಾಪಟುಗಳಿಗೆ ಬಹಳ ದೊಡ್ಡ ರೀತಿಯಲ್ಲಿ ಗೌರವ ಸ್ಥಾನಮಾನ ನೀಡಿ ಗೌರವಿಸಲಾಗುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಮೊಬೈಲ್ ಹಾವಳಿಯಿಂದ ಕುಸ್ತಿ ನಶಿಸಿ ಹೋಗುತ್ತಿವೆ. ಮೊಬೈಲ್ ಇಲ್ಲದಿದ್ದರೆ ಜೀವನ ಸಾಧ್ಯವಿಲ್ಲ ಎನ್ನುವಷ್ಟು ಮೊಬೈಲ್ ದಾಸರಾಗಿದ್ದಾರೆ ಎಂದು ಶ್ರೀಗಳು ವಿಷಾದಿಸಿದರು.


ಕುಸ್ತಿಯಿಂದ ಮಾನಸಿಕ ನೆಮ್ಮದಿ, ಸದೃಢ ಆರೋಗ್ಯ, ಮತ್ತು ಮನಸ್ಸು ಹಿಡಿತದಲ್ಲಿ ಇಟ್ಟುಕೊಳ್ಳಲು ದಾರಿಯಾಗುತ್ತದೆ. ಆಗಾಗಿ ಮಕ್ಕಳು ಮೊಬೈಲ್ ದಾಸರಾಗದೆ ಕುಸ್ತಿ ಸೇರಿದಂತೆ ಎಲ್ಲಾ ಕ್ರೀಡೆಗಳಲ್ಲಿ ಹೆಚ್ಚು ತೊಡಗಿಸಿಕೊಂಡು ಆರೋಗ್ಯವಂತ ಜೀವನವನ್ನು ನಡೆಸಬೇಕೆಂದು ಅವರು ಕರೆ ನೀಡಿದರು.

ಶಾಸಕ ಎಸ್. ರಾಮಪ್ಪ ಮಾತನಾಡಿ, ಕುಸ್ತಿ ಅತ್ಯಂತ ಕಠಿಣ ಕ್ರೀಡೆ. ಇದನ್ನು ಕರಗತ ಮಾಡಿಕೊಳ್ಳುವುದು ಸುಲಭವಲ್ಲ. ತಾಳ್ಮೆ, ಜಾಣ್ಮೆ ಚಾಕಚಕ್ಯತೆ ಇದ್ದವರು ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ತಿಳಿಸಿದರು. ಹಿಂದೆ ಕುಸ್ತಿ ಪಟುಗಳು ಗರಡಿ ಮನೆಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ದೈಹಿಕ ಕಸರತ್ತು ನಡೆಸುತ್ತಿದ್ದರು. ಆದರೆ, ಇವಾಗ ಹೆಚ್ಚು ಜಿಮ್ ಕಡೆ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ದೈಹಿಕ ಕಸರತ್ತು ಗರಡಿಯಲ್ಲಿ ಕಲಿತಷ್ಟು ಜಿಮ್‌ನಲ್ಲಿ ಆಗದು ಎಂದವರು ಅಭಿಪ್ರಾಯ ಪಟ್ಟರು.

ಈ ಸಂದರ್ಭದಲ್ಲಿ ಕುಸ್ತಿ ಪಂದ್ಯದ ವ್ಯವಸ್ಥಾಪಕ ನಂದಿಗಾವಿ ಶ್ರೀನಿವಾಸ್, ಕುರುಬ ಸಮಾಜದ ಅಧ್ಯಕ್ಷ ಕೆ. ಜಡಿಯಪ್ಪ, ವಕೀಲ ಎಂ. ನಾಗೇಂದ್ರಪ್ಪ, ಸುರೇಶ್ ಚಂದಪೂರ್, ರೇವಣಪ್ಪ, ಜಗದೀಶ್ ಚೂರಿ, ನಾರಾಯಣ, ಸೈಯದ್ ಆಸೀಫ್, ಸುಚೇತ್ ಮತ್ತಿತರರು ಉಪಸ್ಥಿತರಿದ್ದರು.

# ಶಾಲೆ ಮುಚ್ಚುವ ನಿರ್ಧಾರ ಜಿಲ್ಲಾಧಿಕಾರಿಗಳ ಹೆಗಲಿಗೆ

## ಬೊಮ್ಮಾಯಿ ನೇತೃತ್ವದ ಸಭೆಯಲ್ಲಿ ತೀರ್ಮಾನ



- ಆಸ್ಪತ್ರೆಗಳಲ್ಲಿ ಮಕ್ಕಳ ಚಿಕಿತ್ಸೆಗೆ ಹೆಚ್ಚಿನ ಕ್ರಮ
- ಮಕ್ಕಳ ಚಿಕಿತ್ಸೆಗೆ ಅಗತ್ಯ ಔಷಧ ದಾಸ್ತಾನು
- 15 ದಿನಕ್ಕೊಮ್ಮೆ ಮಕ್ಕಳ ಆರೋಗ್ಯ ತಪಾಸಣೆ
- ಮನೆಯಲ್ಲಿರುವ ರೋಗಿಗಳಿಗೆ ನಿಯಮಿತವಾಗಿ ಔಷಧ ಕಿಟ್
- ಸೋಂಕಿತರ ಆಸ್ಪತ್ರೆ ದಾಖಲು ಅಗತ್ಯದ ಬಗ್ಗೆ ಪರಿಶೀಲನೆ
- ಸಂಕ್ರಾಂತಿ ಹಬ್ಬದ ವೇಳೆ ನಿಯಮಗಳ ಉಲ್ಲಂಘನೆಯಾದರೆ ದೇವಾಲಯಗಳ ವಿರುದ್ಧ ಕ್ರಮ

ಬೆಂಗಳೂರು, ಜ. 11 - ಕೊರೊನಾ ಪ್ರಕರಣಗಳು ಬೆಂಗಳೂರಿನಲ್ಲಿ ತೀವ್ರವಾಗಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ನಗರದಲ್ಲಿ ಟೆಸ್ಟ್ ಪ್ರಮಾಣವನ್ನು ಪ್ರತಿನಿತ್ಯ 1.3 ಲಕ್ಷಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಮುಂಚೂಣಿ ಕಾರ್ಯಕರ್ತರಿಗೆ ಮೂರನೇ ಡೋಸ್ ನೀಡುವುದನ್ನು ಹೆಚ್ಚಿಸಲು ಮತ್ತು ಸೋಂಕು ಹೆಚ್ಚಾದರೆ ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ಜಿಲ್ಲಾಧಿಕಾರಿಗಳಿಗೆ ಬಿಡಲು ಸರ್ಕಾರ ನಿರ್ಧಾರ ತೆಗೆದುಕೊಂಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜೊತೆ ಆನ್‌ಲೈನ್ ಮೂಲಕ ಸಭೆ ನಡೆಸಿದ ನಂತರ ಈ ಬಗ್ಗೆ ಮಾತನಾಡಿರುವ ಗೃಹ ಸಚಿವ ಆರಗ ಜ್ಞಾನೇಂದ್ರ, ಬೆಂಗಳೂರಿನಲ್ಲಿ ಪ್ರಸಕ್ತ ದಿನಕ್ಕೆ 1.1 ಲಕ್ಷ ಟೆಸ್ಟ್ ನಡೆಸಲಾಗುತ್ತಿದೆ. ಇದನ್ನು 1.3 ಲಕ್ಷಕ್ಕೆ ಹೆಚ್ಚಿಸಲಾಗುವುದು ಎಂದಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜ.13ರ ಗುರುವಾರದಂದು ಆನ್‌ಲೈನ್ ಮೂಲಕ ಸಭೆ ಕರೆದಿದ್ದಾರೆ. ಸಭೆಯ ನಂತರ ಕೆಲ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು. ಪ್ರಸಕ್ತ ಶೇ.95 ರಷ್ಟು ಜನರು ಮನೆಯಲ್ಲೇ ಪ್ರತ್ಯೇಕವಾಗಿದ್ದಾರೆ. ಅವರು ಪೂರ್ಣ ಗುಣಮುಖವಾಗುವವರೆಗೂ ಎಚ್ಚರವಾಗಿರಬೇಕು ಎಂದೂ ಅವರು ತಿಳಿಸಿದ್ದಾರೆ.

ಮನೆಯಲ್ಲಿ ಪ್ರತ್ಯೇಕವಾಗಿರವವರಿಗೆ ಸಮಯೋಚಿತವಾಗಿ ಔಷಧದ ಕಿಟ್ ನೀಡಬೇಕು. ಸೋಂಕಿತರಿಗೆ ಆಸ್ಪತ್ರೆಯ ಅಗತ್ಯವಿದೆಯೇ ಎಂಬ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಲಾಗುವುದು.

ಇಡೀ ರಾಜ್ಯದಲ್ಲಿ ಪ್ರಸಕ್ತ 1.5 ಲಕ್ಷ ಟೆಸ್ಟ್‌ಗಳನ್ನು ನಡೆಸಲಾಗುತ್ತಿದೆ. ಇದರಲ್ಲಿ 1.25 ಲಕ್ಷ ಆರ್‌ಟಿ - ಪಿಸಿಆರ್ ಟೆಸ್ಟ್‌ಗಳಾಗಿವೆ. ಆದರೆ, ಬೆಂಗಳೂರಿನಲ್ಲಿ ಶೇ.80-90 ಪ್ರಕರಣಗಳು ಬರುತ್ತಿರುವ ಹಿನ್ನೆಲೆಯಲ್ಲಿ, ಬೆಂಗಳೂರಿಗೆ ಪ್ರತ್ಯೇಕ ನಿಯಮಗಳನ್ನು ರೂಪಿಸಲಾಗಿದೆ.

ಹಾಸ್ಟೆಲ್ ಹಾಗೂ ವಸತಿ ಶಾಲೆಗಳಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಶಾಲೆಗಳನ್ನು ನಡೆಸುವ ಇಲ್ಲವೇ ಮುಚ್ಚುವ ನಿರ್ಧಾರವನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲು ನಿರ್ಧರಿಸಲಾಗಿದೆ ಎಂದು ಜ್ಞಾನೇಂದ್ರ ಹೇಳಿದ್ದಾರೆ.

ಮಕ್ಕಳ ಔಷಧ ಕೊರತೆಯಾಗದಿರಲು ಹೆಚ್ಚು ಔಷಧಿಗಳನ್ನು ಸಂಗ್ರಹಿಸಿ ದಾಸ್ತಾನು ಮಾಡಲು ನಿರ್ಧರಿಸಲಾಗಿದೆ. ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಮಕ್ಕಳಿಗಾಗಿ ವಿಶೇಷ ಬೆಡ್‌ಗಳನ್ನು ರೂಪಿಸಲಾಗುವುದು. ಪ್ರತಿ ಶಾಲೆಗೆ ಹದಿನೈದು ದಿನಕ್ಕೊಮ್ಮೆ ಶಿಕ್ಷಣ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ (2ನೇ ಪುಟಕ್ಕೆ)

## ಚನ್ನಗಿರಿ: ಇಂದಿರಾ ವಸತಿ ಶಾಲೆಯಲ್ಲಿ 46 ಪಾಸಿಟಿವ್

ದಾವಣಗೆರೆ, ಜ.11- ಚನ್ನಗಿರಿ ತಾಲ್ಲೂಕಿನ ಇಂದಿರಾ ವಸತಿ ಶಾಲೆಯ ಪ್ರಾಂಶುಪಾಲರೂ ಹಾಗೂ 45 ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕು ದೃಢಪಟ್ಟಿರುವುದಾಗಿ ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ತಾಂತ್ರಿಕ ಕಾರಣಗಳಿಂದಾಗಿ ಇಂದಿನ ಲೆಕ್ಕದಲ್ಲಿ ಸೋಂಕಿತರ ಸಂಖ್ಯೆಯನ್ನು ಏರ್ಪಡೆ ಮಾಡಲಾಗಿಲ್ಲ ಎಂದೂ ಅವರು ಹೇಳಿದ್ದಾರೆ.

**56 ಪಾಸಿಟಿವ್ :** ಜಿಲ್ಲೆಯಲ್ಲಿ ಮಂಗಳವಾರ 56 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 148ಕ್ಕೆ ಏರಿಕೆಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 34, ಹರಿಹರ 2, ಜಗಳೂರು 6, ಚನ್ನಗಿರಿ 7, ಹೊನ್ನಾಳಿ 2 ಹಾಗೂ ಹೊರ ಜಿಲ್ಲೆಯ ಐವರಲ್ಲಿ ಸೋಂಕು ಕಾಣಿಸಿಕೊಂಡಿದೆ.

## ಹರಪನಹಳ್ಳಿ: ವಾಲ್ಮೀಕಿ ಭವನಕ್ಕೆ ಮತ್ತೆ 50 ಲಕ್ಷ ಶೀಘ್ರ ಬಿಡುಗಡೆ: ರೆಡ್ಡಿ

ಹರಪನಹಳ್ಳಿ, ಜ.11- ವಾಲ್ಮೀಕಿ ಸಮುದಾಯ ಭವನದ ಮುಂದುವರೆದ ಕಾಮಗಾರಿಗೆ ಇದೀಗ 50 ಲಕ್ಷ ರೂ.ಬಿಡುಗಡೆಯಾಗಿದ್ದು, ಇನ್ನೂ 50 ಲಕ್ಷ ರೂ.ಗಳನ್ನು ಶೀಘ್ರದಲ್ಲಿಯೇ ಮಂಜೂರು ಮಾಡಿಸುವುದಾಗಿ ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.

ಪಟ್ಟಣದ ಅರಸಿಕೆರಿ ಬೈಪಾಸ್ ರಸ್ತೆಯಲ್ಲಿ ಒಟ್ಟು 2 ಕೋಟಿ ರೂ. ವೆಚ್ಚದಲ್ಲಿ ವಾಲ್ಮೀಕಿ ಸಮುದಾಯ ಭವನ ಸುಸಜ್ಜಿತವಾಗಿ ನಿರ್ಮಾಣವಾಗಲಿದೆ. ಪ್ರಸ್ತುತ 1 ಕೋಟಿ ರೂ. ವೆಚ್ಚದ ಕಾಮಗಾರಿ ನಡೆಯುತ್ತಿದೆ ಎಂದವರು ಹೇಳಿದರು.

ಹರಪನಹಳ್ಳಿ ಪಟ್ಟಣದ ಐತಿಹಾಸಿಕ ಹಿರೇಕೆರೆಯಲ್ಲಿ ಬಳ್ಳಾರಿ ಜಾಲಿ ಬೆಳೆದು ಕೆರೆ ಹಾಳಾಗಿದ್ದು, ಕೆರೆ ದುರಸ್ತಿ ಬಗ್ಗೆ ಮಾತನಾಡಿದ ಶಾಸಕರು, ಜಂಗಲ್ ಕಟಿಂಗ್ ಗೆ ಪ್ರಸ್ತಾವನೆ ಸಿದ್ಧವಾಗಿದೆ. ಸಂಬಂಧಿಸಿದ ಅಧಿಕಾರಿಗಳ ಜೊತೆ ಮಾತನಾಡಿ ಕೆರೆಗೆ ನದಿ ನೀರು ಬರುವುದರೊಳಗಾಗಿ ದುರಸ್ತಿ ಕಾರ್ಯ ಕೈಗೊಳ್ಳುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ, ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಕಾರ್ಯದರ್ಶಿ ಆರ್ (3ನೇ ಪುಟಕ್ಕೆ)

## ಇ.ವಿ.ಎಂ. ನಿಲ್ಲಿಸಿ, ಇಲ್ಲವೇ ದಯಾಮರಣ ಕೊಡಿ

### ರಾಷ್ಟ್ರಪತಿಗೆ ಛತ್ತೀಸ್‌ಘಡ ಸಿಎಂ ತಂದೆ ಪತ್ರ

ದುರ್ಗ್, ಜ. 11 – ಮತ ಯಂತ್ರಗಳ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಛತ್ತೀಸ್‌ಘಡದ ಮುಖ್ಯಮಂತ್ರಿ ಭೂಪೇಶ್ ಬಾಘೇಲ್ ತಂದೆ ನಂದ ಕುಮಾರ್ ಬಾಘೇಲ್, ಮತಯಂತ್ರಗಳ ಬದಲು ಮತಪತ್ರಗಳನ್ನು ಬಳಸುವಂತೆ ರಾಷ್ಟ್ರಪತಿಗೆ ಪತ್ರ ಬರೆದಿದ್ದಾರೆ.

ಸೋಮವಾರ ಪತ್ರ ಬರೆದಿರುವ ಅವರು, ತಮ್ಮ ಬೇಡಿಕೆಯನ್ನು ಈಡೇರಿಸಲು ಸಾಧ್ಯವಾಗದಿದ್ದರೆ ದಯಾ ಮರಣಕ್ಕೆ ಅವಕಾಶ ನೀಡುವಂತೆ ಕೇಳಿದ್ದಾರೆ.

ದೇಶದ ನಾಗರಿಕರ ಸಂವಿಧಾನಿಕ ಹಕ್ಕುಗಳ ದೊಡ್ಡ ಪ್ರಮಾಣದ ಉಲ್ಲಂಘನೆಯಾಗುತ್ತಿದೆ. ಸಂವಿಧಾನದ ಮೂರು ಅಂಗಗಳಾದ ಶಾಸಕಾಂಗ, ನ್ಯಾಯಾಂಗ ಹಾಗೂ (3ನೇ ಪುಟಕ್ಕೆ)

## ಭರಮಸಾಗರ-ತುಪ್ಪದಹಳ್ಳಿ ಕೆರೆಗಳಿಗೆ ಸಮೃದ್ಧ ನೀರು

### ತರಳಬಾಳು ಜಗದ್ಗುರುಗಳು ಸಂತಸ

ಸಿರಿಗೆರೆ, ಜ.11- ಏತನೀರಾವರಿ ಯೋಜನೆ ಅಡಿಯಲ್ಲಿ ತುಂಗಭದ್ರಾ ನದಿಯ ನೀರಿನಿಂದ ಒಂದು ಸಾವಿರ ಎಕರೆ ವಿಸ್ತೀರ್ಣದ ಭರಮಸಾಗರದ ದೊಡ್ಡಕೆರೆ ತುಂಬಿರುವುದಕ್ಕೆ ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು



ಅಪಾರ ಸಂತಸ ವ್ಯಕ್ತಪಡಿಸಿದ್ದಾರೆ. ಈ ಕೆರೆಯ ಕೋಡಿಯಿಂದ ಹೊರಹೋಗುತ್ತಿರುವ ನೀರು ಜಗಳೂರು ತಾಲ್ಲೂಕಿನ ತುಪ್ಪದಹಳ್ಳಿ ಕೆರೆಗೆ ಹರಿಯುತ್ತಿದೆ. ಹಳ್ಳದಲ್ಲಿ ಭೋರ್ಗರೆದು ಧುಮ್ಮಿಕ್ಕುತ್ತಿರುವ ನೀರಿನ ಆಕರ್ಷಕ ದೃಶ್ಯ ರೈತರ ಮೊಗದಲ್ಲಿ ಹರ್ಷ ತಂದಿದೆ . ದೇವರ ಕೃಪೆಯಿಂದ ಮೂರು ವರ್ಷಗಳ ಪ್ರಯತ್ನ ಸಾರ್ಥಕವಾಗಿದೆ ಎಂದು ಶ್ರೀಗಳು ಅಭಿಪ್ರಾಯ ಪಟ್ಟಿದ್ದಾರೆ.

ತುಪ್ಪದಹಳ್ಳಿ ಕೆರೆಯು 1200 ಎಕರೆ ವಿಸ್ತೀರ್ಣ ಹೊಂದಿದೆ. ಭರಮಸಾಗರಕ್ಕಿಂತಲೂ ಹೆಚ್ಚಿನ ನೀರು (2ನೇ ಪುಟಕ್ಕೆ)

## ಕಾಂಗ್ರೆಸ್ ಪಾದಯಾತ್ರೆ ವಿರುದ್ಧ ಮತ್ತೊಂದು ಎಫ್.ಐ.ಆರ್.

ರಾಮನಗರ, ಜ. 11 – ಮೇಕೆದಾಟು ಯೋಜನೆ ಜಾರಿಗೆ ತರುವಂತೆ ಒತ್ತಾಯಿಸಿ ಪಾದಯಾತ್ರೆ ನಡೆಸುತ್ತಿರುವ ಕಾಂಗ್ರೆಸ್‌ನ 40 ನಾಯಕರ ವಿರುದ್ಧ ಇನ್ನೊಂದು ಎಫ್.ಐ.ಆರ್. ದಾಖಲಿಸಲಾಗಿದೆ.

ಕೊರೊನಾ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ್ದಾಗಿ ಸಾತನೂರು ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ. ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ಸಂಸದ ಡಿ.ಕೆ. ಸುರೇಶ್, ಮಾಜಿ ಸಚಿವರಾದ ಕೃಷ್ಣ ಬೈರೇಗೌಡ, ಹೆಚ್. ಆಂಜನೇಯ, ಮೋಟಮ್ಮ, ಪಿ.ಟಿ. ಪರಮೇಶ್ವರನಾಯ್ಕ ಮತ್ತಿತರರ ಹೆಸರುಗಳು ಎಫ್.ಐ.ಆರ್.ನಲ್ಲಿವೆ.

## ದೂಡಾ : ಒಪ್ಪಿಗೆ ಇಲ್ಲದೇ ಜಮೀನಿನ ದರ ನಿಗದಿ

ದಾವಣಗೆರೆ, ಜ.11- ಒಪ್ಪಿಗೆ ಪಡೆಯದೆ ರೈತರ ಜಮೀನುಗಳಿಗೆ ದೂಡಾದಿಂದ ದರ ನಿಗದಿ ಮಾಡಿರುವುದನ್ನು ಹಿಂಪಡೆಯಬೇಕೆಂದು ಒತ್ತಾಯಿಸಿ ಹಳೇ ಕುಂದವಾಡ ಗ್ರಾಮದ ರೈತರು ನಗರದಲ್ಲಿಂದು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಹಾಗೂ ದೂಡಾ ಕಚೇರಿಯಲ್ಲಿ ಅಧ್ಯಕ್ಷ ದೇವರಮನೆ ಶಿವಕುಮಾರ್ ಮತ್ತು ಉಪವಿಭಾಗಾಧಿಕಾರಿ ಮಮತಾ ಹೊಸ ಗೌಡರ್ ಅವರಿಗೆ ಮನವಿ ಸಲ್ಲಿಸಿದರು.

ಈ ಹಿಂದೆ 2018-19ರಲ್ಲಿ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಮ್ಮ ಗ್ರಾಮದಲ್ಲಿ ನಗರಾಭಿವೃದ್ಧಿ ಯೋಜನೆಯಡಿಯಲ್ಲಿ ಹಳೇ ಕುಂದುವಾಡ ಗ್ರಾಮದ ಸರ್ವೆ ನಂ. 125 ರಿಂದ 139/7 ರ (3ನೇ ಪುಟಕ್ಕೆ)

## ವೈಕಂಠ ಏಕಾದಶಿ, ಸಂಕ್ರಾಂತಿಗೆ ಮಾರ್ಗಸೂಚಿ

ಬೆಂಗಳೂರು, ಜ. 11 – ವೈಕುಂಠ ಏಕಾದಶಿ ಹಾಗೂ ಸಂಕ್ರಾಂತಿ ಹಬ್ಬಗಳಿಗೆ ರಾಜ್ಯಸರ್ಕಾರ ಪ್ರತ್ಯೇಕ ಮಾರ್ಗಸೂಚಿ ಪ್ರಕಟಿಸಿದೆ.

ಇದರ ಅನ್ವಯ ದೇವಾಲಯಗಳ ಒಳ ಆವರಣದಲ್ಲಿ ಮಾತ್ರ ದೈನಂದಿನ ಪೂಜಾ ಕೈಂಕರ್ಯ ನಡೆಸಬಹುದಾಗಿದೆ.

ವೈಕುಂಠ ಏಕಾದಶಿ ದಿನದಂದು ಎರಡು ಡೋಸ್ ಲಸಿಕೆ ಪಡೆದ 50 ಜನರಿಗೆ ಮಾತ್ರ ಒಂದು ಕಾಲಕ್ಕೆ ದರ್ಶನಕ್ಕೆ ಅವಕಾಶ ನೀಡಬೇಕು. ಯಾವುದೇ ಸೇವೆಗಳಿಗೆ ಅವಕಾಶವಿಲ್ಲ. ಹಬ್ಬದ ಸಲುವಾಗಿ ಯಾವುದೇ ಮೆರವಣಿಗೆ, ಮನರಂಜನಾ ಕಾರ್ಯಕ್ರಮ ಆಯೋಜಿಸುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ಶೇ.35ರ ಪಾಲುಗಾರಿಕೆ ನೀಡಲು ವೊಡ ಪ್ರಸ್ತಾಪ

ನವದೆಹಲಿ, ಜ. 11 – ನಷ್ಟಕ್ಕೆ ಸಿಲುಕಿರುವ ವೊಡಫೋನ್ ಐಡಿಯಾ (ವಿ.ಐ.ಎಲ್.) ಕಂಪನಿ, ತನ್ನ 16 ಸಾವಿರ ಕೋಟಿ ರೂ.ಗಳ ಬಡ್ಡಿ ಹೊಣೆಗಾರಿಕೆಯನ್ನು ಸರ್ಕಾರದ ಪಾಲುಗಾರಿಕೆಯಾಗಿ ಪರಿವರ್ತಿಸಲು ಸಮ್ಮತಿಸಿದೆ. ಇದರಿಂದ ಸರ್ಕಾರ ಕಂಪನಿಯ ಶೇ.35.8ರಷ್ಟು ಪಾಲುಗಾರಿಕೆ ಪಡೆಯಲಿದೆ. ಈ ಬಗ್ಗೆ ಟೆಲಿಕಾಂ ನಿಯಂತ್ರಕರಲ್ಲಿ ಮಾಹಿತಿ ಸಲ್ಲಿಸಲಾಗಿದೆ.

ವೊಡಫೋನ್ ಈಗ 1.95 ಲಕ್ಷ ಕೋಟಿ ರೂ.ಗಳ ಸಾಲದಲ್ಲಿ ಸಿಲುಕಿದೆ. ಎಲ್ಲವೂ ಯೋಜನೆಯಂತೆ ನಡೆದರೆ, (2ನೇ ಪುಟಕ್ಕೆ)

## ರಾಣೇಬೆನ್ನೂರು ಬಂದ್‌ಗೆ ಕರೆ

### ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕೆ ಒತ್ತಾಯ

ರಾಣೇಬೆನ್ನೂರು, ಜ. 11 - ಬಾಗಲಕೋಟೆ-ಬಿಳಿಗಿರಿ ರಂಗನಬೆಟ್ಟ ರಾಜ್ಯ ಹೆದ್ದಾರಿ 57 ಈ ರಸ್ತೆಗೆ ಹೊಂದಿಕೊಂಡಂತೆ ರಾಣೇಬೆನ್ನೂರಿನ ರೇಲ್ವೇ ಗೇಟ್ ನಂ. 219 ಕ್ಕೆ ಶೀಘ್ರ ಮೇಲ್ಸೇತುವೆಗೆ ನಿರ್ಮಿಸಲು ಒತ್ತಾಯಿಸಿ ಬರುವ ಫೆಬ್ರುವರಿ 28 ರಂದು ವಾಣಿಜ್ಯ ನಗರಿ ರಾಣೇಬೆನ್ನೂರು ಬಂದ್ ಮಾಡಲಾಗುವುದೆಂದು ರೇಲ್ವೇ ಮೇಲ್ಸೇತುವೆ ನಿರ್ಮಾಣ ಹೋರಾಟ ಸಮಿತಿಯ ಅಧ್ಯಕ್ಷ ರವೀಂದ್ರಗೌಡ ಎಫ್. ಪಾಟೀಲ ತಿಳಿದ್ದಾರೆ. ಅವರು ಇಂದು ರಾಣೇಬೆನ್ನೂರು ದೇವರಗುಡ್ಡ ರಸ್ತೆಯ ರೇಲ್ವೆ ಕೆಳ ಸೇತುವೆಯ ಅವೈಜ್ಞಾನಿಕ (2ನೇ ಪುಟಕ್ಕೆ)

## ಮೇಕೆದಾಟು ಜಾರಿಯಾಗಲೇ ಬೇಕು

ಬೆಂಗಳೂರು ಜ. 11- ಮೇಕೆದಾಟು ನಮ್ಮ ಕಾಂಗ್ರೆಸ್ ಸರ್ಕಾರದ ಯೋಜನೆ. ಈ ಯೋಜನೆ ಜಾರಿಯಾಗಬೇಕು ಎಂದು ಹೆಚ್ಚಿನ ಆಸಕ್ತಿ ವಹಿಸಿ ಡಿ.ಪಿ.ಆರ್ ಸಿದ್ಧಪಡಿಸಿದ್ದು ನಮ್ಮ ಸರ್ಕಾರ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.



ಮೇಕೆದಾಟು ಯೋಜನೆ ಜಾರಿ ಒತ್ತಾಯಿಸಿ ಮೂರನೇ ದಿನದ ಪಾದಯಾತ್ರೆ ಕೈಗೊಳ್ಳುವುದಕ್ಕೆ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಲ ಸಂಪನ್ಮೂಲ ಸಚಿವರಾದ ಗೋವಿಂದ ಕಾರಜೋಳ ಅವರು ನಿತ್ಯ ನಮ್ಮ ಬಗ್ಗೆ ಇಲ್ಲಸಲ್ಲದ ಸುಳ್ಳು ಆರೋಪ ಮಾಡುವ ತಮ್ಮ ತಪ್ಪನ್ನು ಮುಚ್ಚಿಕೊಳ್ಳುವ ಪ್ರಯತ್ನ ಎಂದು ಟೀಕಿಸಿದರು.

ರಾಜ್ಯದಲ್ಲಿ ನಾವು ಅಧಿಕಾರದಲ್ಲಿ ಇದ್ದಾಗ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇತ್ತು, ನಮಗೆ ಯೋಜನೆ ಜಾರಿಮಾಡಲು ಅನುಮತಿ ಸಿಗಲಿಲ್ಲ ಅಂತ ಬಿಡಬಹುದು, ಆದರೆ ಈಗ ಹಾಗಿಲ್ಲ. ಎರಡೂ ಕಡೆ ಬಿಜೆಪಿ ಸರ್ಕಾರ ಇದೆ, ಕೇಂದ್ರದಲ್ಲಿ ನೀರಾವರಿ, ಕಾನೂನು ಸಚಿವರು (2ನೇ ಪುಟಕ್ಕೆ)

## ಲಾಕ್‌ಡೌನ್ ಹೇಳಿಕೆಗೆ ತರಾಟೆ

### ಶ್ರಮಿಕರಿಗೆ ಹಣ ಕೊಟ್ಟು ಲಾಕ್‌ಡೌನ್ ಮಾಡಿ : ಸಿದ್ದರಾಮಯ್ಯ ತಾಕೀತು

ರೋಗ ಉಲ್ಬಣವಾದರೆ ಲಾಕ್ ಡೌನ್ ಮಾಡಬೇಕಾಗುತ್ತೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಬೇಜವಾಬ್ದಾರಿಯ ಹೇಳಿಕೆ ನೀಡಿದ್ದಾರೆ. ಈ ಹಿಂದೆ ಮಾಡಿರುವ ಲಾಕ್ ಡೌನ್ ನಿಂದ ಜನರ ಬದುಕು ಬೀದಿಗೆ ಬಂದಿದೆ, ಇನ್ನೂ ಅವರ ದುಡಿಮೆ ಸರಿ ದಾರಿಗೆ ಬಂದಿಲ್ಲ, ಹೀಗಿರುವಾಗ ಮತ್ತೆ ಲಾಕ್ ಡೌನ್ ಮಾಡುವುದು ದೊಡ್ಡ ತಪ್ಪು ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಲಾಕ್‌ಡೌನ್ ಮಾಡುವುದಾದರೆ ಕಾರ್ಮಿಕರು, ಕೂಲಿಕಾರರು, ನೇಕಾರರು, ಸವಿತಾ ಸಮಾಜದವರು, ಆಟೋ ಕ್ಯಾಬ್ ಚಾಲಕರು, ಬಡಗಿಗಳು, ಬೀದಿಬದಿ ವ್ಯಾಪಾರಿಗಳು ಹೀಗೆ ಎಲ್ಲಾ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಗೆ ಮೊದಲೇ ಪರಿಹಾರ ಧನ ನೀಡಿ. (3ನೇ ಪುಟಕ್ಕೆ)


**Faculty and Librarian Required**

Leading educational group in Karnataka with extraordinary track record of more than 5 decades having excellent infrastructure facilities and attracts students from across Karnataka for BCA and B.Com Courses is looking for deserving candidates to fill the following positions

1) Lecturers for BCA and B.Com courses
2) Librarian

Qualifications :

As per UGC norms. Preference will be given to the candidates having higher qualifications

Interested may send their resumes to
applyforjobsatdvg@gmail.com
within 5 days



**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟುಗಳು ಮಾರಾಟಕ್ಕಿವೆ**
ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, ಸಂಜೀವಿನಿ ಆಂಜನೇಯ ದೇವಸ್ಥಾನದ ಹತ್ತಿರ 30x40 ಅಳತೆಯ 2 ಸೈಟುಗಳು ಮಾರಾಟಕ್ಕಿವೆ. ಆಸಕ್ತರು ಸಂಪರ್ಕಿಸಿ :
ಮೊ. 82178-52518

**ಮನೆ ಬಾಡಿಗೆಗೆ ಇದೆ**
ಎಂಸಿಸಿ 'ಎ' ಬ್ಲಾಕ್, ಚರ್ಚ್ ಮುಖ್ಯ ರಸ್ತೆಯಲ್ಲಿ 1 ಬೆಡ್ ರೂಮ್ ನ ಸುಸಜ್ಜಿತ ಮೊದಲ ಮಹಡಿ ಮನೆ ಬಾಡಿಗೆಗೆ ದೊರೆಯುತ್ತದೆ.
ಫೋ. : 98442 28851

**ಬೇಕಾಗಿದ್ದಾರೆ**
ಮೆಡ್‌ಕ್ಯೂರ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ: ಶೋಭಾ ಟಾಕೀಸ್ ಹತ್ತಿರ, ಹರಿಹರ
ಮೊ: 78999 91860

**ಮನೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಮಲ್ಲಿಗೆ ಹೆಲ್ತ್ ಸೆಂಟರ್ ಬಿಲ್ಡಿಂಗ್, ಆಫೀಸ್ ಅಥವಾ ಕ್ಲಿನಿಕ್‌ಗೆ ಬಾಡಿಗೆಗೆ ಇದೆ.
77955 07876

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ, ಬನಶಂಕರಿ ಲೇಔಟ್‌ನಲ್ಲಿ 70x63 ಕಾರ್ನರ್, 40x63 West, 30x63, ಕಾರ್ನರ್, 40x61 East, 30x50 West, 30x47 East, ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಮಾರಾಟಕ್ಕಿದೆ**
ನಗರದ ಕೆ.ಬಿ. ಬಡಾವಣೆಯಲ್ಲಿ ಬಿಜೆಪಿ ಕಚೇರಿ ಹತ್ತಿರ 40x44 ಅಳತೆಯ ನೀರಿನ ಸೌಕರ್ಯವುಳ್ಳ ಮನೆ ಮಾರಾಟಕ್ಕಿದೆ. ಆಸಕ್ತರು ವಿಚಾರಿಸಿ.
94487 89513
98445 72340
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ನೆಲ ಮಳಿಗೆ ಬಾಡಿಗೆಗೆ ಇದೆ**
ಶ್ರೀ ಸಿದ್ದೇಶ್ವರ ಕಾಂಪ್ಲೆಕ್ಸ್ ತ್ರಿಶೂಲ್ ರಸ್ತೆ, ಕೆ.ಬಿ. ಬಡಾವಣೆ ಆದರ್ಶ ಶಾಮಿಯಾನ ಹತ್ತಿರ ಇರುವ 12x10 ಚದರ ಅಡಿ ಅಳತೆಯ ATM, ಆಫೀಸ್‌ಗೆ ಅನುಕೂಲವಿರುವ ನೆಲ ಅಂತಸ್ತಿನ ಸುಸಜ್ಜಿತ ಮಳಿಗೆ ಬಾಡಿಗೆಗೆ ಇದೆ.
ಸಂಪರ್ಕಿಸಿ
99165 25586

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕಿನಲ್ಲಿ ಅಡಿಕೆ ತೋಟದಲ್ಲಿ ಕೆಲಸ ಮಾಡಲು ಒಂದು ಕುಟುಂಬದವರು ಬೇಕಾಗಿದ್ದಾರೆ.
94484 39639

**ಕುರಿಗಳು ಮಾರಾಟಕ್ಕಿವೆ**
ಶ್ರೀ -ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ. ದಾವಣಗೆರೆಯಿಂದ ಕೇವಲ 4 ಕಿ.ಮೀ
ಸಂಪರ್ಕಿಸಿ
70196 02944
94807 46013

**ಬೇಕಾಗಿದ್ದಾರೆ**
ಭರಮಸಾಗರ, ದಾವಣಗೆರೆ, ಹರಿಹರ, ರಾಣೇಬೆನ್ನೂರಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ESI, PF ಸೌಲಭ್ಯವಿದೆ.
ಸಫಾಜ್ ಸೆಕ್ಯೂರಿಟಿ
ವಿನೋಬನಗರ, 3ನೇ ಮೇನ್, ಪಿ.ಬಿ. ರಸ್ತೆ, ದಾವಣಗೆರೆ.
91130 53483

**WANTED**
Staff - 2, Work to Hardware Shop. Salary 8 to10 K /month
Samruddhi Ply & Hardware
Hadadi Road, opp Vani Rice Mill, Near T.V.S Show room, Davanagere
76760 55550, 99803 39333

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ಬ್ಯಾಡಗಿಯಲ್ಲಿರುವ ಹೋಟೆಲ್‌ಗೆ ಅಡುಗೆ ಭಟ್ಟರು ಮತ್ತು ಸಹಾಯಕರು ಪುರುಷರು ಅಥವಾ ಮಹಿಳೆಯರು ಬೇಕಾಗಿದ್ದಾರೆ. (ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ)
93437 45992

**ಮನೆ ಬಾಡಿಗೆಗೆ ಇದೆ**
ಪಿ.ಜೆ ಬಡಾವಣೆ 4ನೇ ಮೇನ್, 9ನೇ ಕ್ರಾಸ್‌ನಲ್ಲಿ ಡೋರ್ ನಂ 360/3 ಗುರುದತ್ತ ನಿವಾಸ, 2 ಬೆಡ್‌ರೂಂ, ಮುನ್ಸಿಪಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗಿದೆ. ಸಂಪರ್ಕಿಸಿ
94486 66668

**ಮನೆಗಳು ಮಾರಾಟಕ್ಕಿವೆ**
40x60 North, ಕುವೆಂಪು ಬಡಾವಣೆಯಲ್ಲಿ, 30x40 West, ಜಯನಗರದಲ್ಲಿ, 30x50 East, 30x40 North ಗೃಹಮಂಡಳಿಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**TEACHERS WANTED**
Teachers wanted for high school
Subject : Social
(Qualification : B.Ed., Ladies only)
95358 85997

**ಉತ್ತಮ ತಳಿಯ ಅಡಿಕೆ ಸಸಿ ಮಾರಾಟಕ್ಕೆ ಲಭ್ಯವಿದೆ**
ದಾವಣಗೆರೆಯಲ್ಲಿ
(ದೊಡ್ಡ ಬಾತಿ)
ಫೋ. : 88920 08800

**ಮನೆ ಬಾಡಿಗೆಗೆ ಇದೆ**
ಎಸ್.ಎಸ್ ಲೇ ಔಟ್ 'ಬಿ' ಬ್ಲಾಕ್ 4ನೇ ಮೇನ್, 8ನೇ ಕ್ರಾಸ್ ಮಹಡಿಯ ಮೇಲೆ ಇರುವ ಎರಡು ಬೆಡ್ ರೂಮ್ ನೀರಿನ ಸೌಕರ್ಯ ಇರುವ ಮನೆ ಬಾಡಿಗೆಗೆ ಇದೆ
ಸಂಪರ್ಕಿಸಿ
98459 20721

**ಮನೆಗಳು ಲೀಸ್‌ಗೆ**
3 ಬೆಡ್ ರೂಂ 1ನೇ ಮಹಡಿ ಹಾಗೂ ಡಬಲ್ ಬೆಡ್ ರೂಂ , 2ನೇ ಮಹಡಿಯ ಸುಸಜ್ಜಿತ ಮನೆಗಳು. ಹದಡಿ ರಸ್ತೆ, ಶ್ರೀನಿವಾಸ ನಗರ, 4ನೇ ಕ್ರಾಸ್, ತರಳಬಾಳು ಶಾಲೆ ಎದುರು ಲೀಸ್‌ಗಿವೆ.
ಸಂಪರ್ಕಿಸಿ
99723 42941

**ದೊರೆಯುತ್ತದೆ**
ತಂತಿಯ ಕಲ್ಲು 6 ಅಡಿ, 7 ಅಡಿ ಹಾಗೂ ಅಡಿಕೆ ಸಸಿ, ತೆಂಗಿನ ಸಸಿ ದೊರೆಯುತ್ತದೆ. ಕೊಮಾರನಹಳ್ಳಿ, ಹರಿಹರ (ತಾ), ದಾವಣಗೆರೆ (ಜಿ)
ಸಂಪರ್ಕಿಸಿ:
94831 88758, 96323 55758

**ಬೆಕ್ಕಿನ ಮರಿ ಬೇಕಾದರೆ ಕರೆ ಮಾಡಿ**
ಫೋ:
96864 62502

**ಶ್ರೀ ನಂದಿ ಟೆಕ್ನಾಲಜಿ**
ವಾಟರ್ ಲೆವೆಲ್ ಕಂಟ್ರೋಲರ್, 2 ವರ್ಷ ವಾರಂಟಿ, ಸಿಂಟೆಕ್ಸ್‌ನಲ್ಲಿ ನೀರು ಖಾಲಿಯಾದ ತಕ್ಷಣ ಮೋಟಾರ್ ತಾನಾಗಿಯೇ ಆನ್ ಆಗುತ್ತದೆ. ತುಂಬಿದ ತಕ್ಷಣ ನಿಲ್ಲುತ್ತದೆ. ಪಂಪನ್ನು ಆರ್ಥಿಕವಾಗಿ ಬಳಕೆ ಮಾಡಿ, ವಿದ್ಯುತ್ ಉಳಿತಾಯ ಮಾಡುತ್ತದೆ.
98447 71956, 99162 49394

**ಬೇಕಾಗಿದ್ದಾರೆ**
ಆಫೀಸ್‌ನಲ್ಲಿ ಕಂಪ್ಯೂಟರ್ ಕೆಲಸಕ್ಕೆ Tally ಆಗಿರುವವರು ಬೇಕಾಗಿದ್ದಾರೆ. ವಿಳಾಸ: ಶ್ರೀ ಆಂಜನೇಯ ಆಗ್ರೋ ಡಿಸ್ಟ್ರಿಬ್ಯೂಟರ್ಸ್, ನಂ.95/1ಎ ಕೆ.ಆರ್. ರೋಡ್, ವಿ.ಆರ್.ಎಲ್. ಆಫೀಸ್ ಹತ್ತಿರ, ದಾವಣಗೆರೆ-577001

**SANJEEVINI SHAKTI PURE HERBAL OIL**
Joint Pain Relief
Stockist : Shri Nanjundeshwara Mart, Narasaraja Road, Davangere.
80505 32902

**ಮಾರಾಟ/ಭೋಗ್ಯಕ್ಕೆ**
ಪಶ್ಚಿಮಕ್ಕೆ ರಸ್ತೆ ಇರುವ 30x40 ಅಡಿ ಅಳತೆಯುಳ್ಳ 2 ಅಂತಸ್ತಿನ ಕಟ್ಟಡವು ಹೈಟೆಕ್ ಆಸ್ಪತ್ರೆ ರಸ್ತೆ, ಜಯನಗರದಲ್ಲಿದೆ. ಬೋರ್, ಮುನ್ಸಿಪಲ್ ವಾಟರ್, ಕಾರ್ ಪಾರ್ಕಿಂಗ್ ವ್ಯವಸ್ಥೆ ಇದೆ. ಸಂಪರ್ಕಿಸಿ :
86187 39278

**ಬೇಕಾಗಿದ್ದಾರೆ**
ರಾಣೇಬೆನ್ನೂರು, ಹರಿಹರ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. 8 ಗಂಟೆ ಕೆಲಸ ESI, PF ಇದೆ.
96113 94063

**ಮನೆ ಕಟ್ಟುವವರಿಗೆ ಸಿಹಿ ಸುದ್ದಿ**
ಸಂಕ್ರಾಂತಿವರೆಗೆ ಬಿಲ್ಡಿಂಗ್ ಪ್ಲಾನ್ಸ್ ಉಚಿತವಾಗಿ ಕೊಡಲಾಗುವುದು. (T&C)
ಕಲ್ಪತರು ಕನ್‌ಸ್ಟ್ರಕ್ಷನ್, ದಾವಣಗೆರೆ.
ಇಂಜಿನಿಯರ್ ಮತ್ತು ಕಾಂಟ್ರಾಕ್ಟರ್ಸ್
ಮೊ. : 98455 83340

**ಸೇಲ್ಸ್‌ಮನ್ ಬೇಕಾಗಿದ್ದಾರೆ**
10th Pass/Fail ಆದ ಮಹಿಳೆಯರು ಸೇಲ್ಸ್‌ಮನ್ ಕೆಲಸಕ್ಕೆ ಬೇಕಾಗಿದ್ದಾರೆ. ಕೆಟಿಜೆ. ನಗರ 11ನೇ ಕ್ರಾಸ್, ಹದಡಿ ರೋಡ್, ದಾವಣಗೆರೆ.
70198 33126, 94480 28276

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 8500/- ಊಟ, ರೂಂ ಉಚಿತ.
97400 98047, 97400 98064

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ: ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637


## ಹರಿಹರ ತಾ.ನಲ್ಲಿ 7 ಜನರಿಗೆ ಸೋಂಕು

ಹರಿಹರ, ಜ.11- ತಾಲ್ಲೂಕಿನಲ್ಲಿ 7 ಜನರಿಗೆ ಕೊರೊನಾ ದೃಢಪಟ್ಟಿದ್ದು, ಅದರಲ್ಲಿ ಬೆಳ್ಳೂಡಿಯ ಓರ್ವ ವ್ಯಕ್ತಿ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ, ಉಳಿದವರು ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ. ಚಂದ್ರ ಮೋಹನ್ ತಿಳಿಸಿದ್ದಾರೆ.

## ಜಗಳೂರಿನಲ್ಲಿಂದು

ಹಜರತ್ ಚಮನ್ ಷಾ ವಲಿಯವರ ಉರುಸು ಇಂದು - ನಾಳೆ ನಡೆಯಲಿದೆ. ಇಂದು ಸಂದಲ್ ಅರ್ಪಣೆ ಹಾಗೂ ನಾಳೆ ಉರುಸು ಜರುಗಲಿದೆ.

# ಕಡಲೆ, ಮೆಕ್ಕೆಜೋಳ ಖರೀದಿ ಕೇಂದ್ರ ಆರಂಭಿಸಲು ಕಲ್ಲೇರುದ್ರೇಶ್ ಒತ್ತಾಯ

ಜಗಳೂರು, ಜ.11- ಕಡಲೆ, ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ತೆರೆದು ಜೂನ್ ವರೆಗೆ ಖರೀದಿಗೆ ಅವಧಿ ವಿಸ್ತರಿಸಿ ರೈತರಿಗೆ ನೆರವಾಗಬೇಕು ಎಂದು ಜೆಡಿಎಸ್ ಮುಂಖಡ ಕೆ.ಬಿ.ಕಲ್ಲೇರುದ್ರೇಶ್ ಒತ್ತಾಯಿಸಿದರು.

ಪಟ್ಟಣದ ಪತ್ರಿಕಾಭವನದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಗಿ ಖರೀದಿ ಕೇಂದ್ರ ತೆರೆದಿದ್ದು, ರೈತರಿಂದ 50ಕ್ವಿಂ.ರಾಗಿ ಖರೀದಿಗೆ ಅವಕಾಶ ನೀಡಬೇಕು. ಅಲ್ಲದೆ ಮಧ್ಯವರ್ತಿಗಳ ಹಾವಳಿ ತಪ್ಪಿಸಲು ಜಿಪಿಎಸ್ ನೊಂದಿಗೆ ಅರ್ಹರಿಂದ ಖರೀದಿಸಬೇಕು ಎಂದು ಆಗ್ರಹಿಸಿದರು.

ರೈತರು ಕಷ್ಟದ ನೆಪಯೊಡ್ಡಿ ವಿಂಡ್ ಪವರ್ ಗಳಿಗೆ ತಮ್ಮ ಜಮೀನು ಮಾರಾಟ ಮಾಡಿದರೆ ಭವಿಷ್ಯದಲ್ಲಿ ಭದ್ರಾ ಮೇಲ್ದಂಡೆ ನೀರಾವರಿ ಸೌಲಭ್ಯದಿಂದ ವಂಚಿತರಾಗುವ ಸಾಧ್ಯತೆ ಇದೆ. ಆದ್ದರಿಂದ ತಾಳ್ಮೆಯಿಂದ ಆರ್ಥಿಕ ಸಂಕಷ್ಟ ನಿವಾರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೋವಿಡ್ ಮತ್ತು ಓಮಿಕ್ರಾನ್ ಸೋಂಕು ನಿಯಂತ್ರಣಕ್ಕೆ ತಾಲ್ಲೂಕು ಆಡಳಿತ ಅಗತ್ಯ ಕ್ರಮಕೈಗೊಳ್ಳಬೇಕು. ಆಸ್ಪತ್ರೆಯಲ್ಲಿ ಔಷಧಿ ಕೊರತೆಯಿದೆ ಎಂಬ ಮಾಹಿತಿ ಕೇಳಿದ್ದು, ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಕಳೆದ ವರ್ಷ ಆಮ್ಲಜನಕ ಘಟಕ ಉದ್ಘಾಟನೆಯಾಗಿದ್ದು, ಶೀಘ್ರ ಕಾರ್ಯಗತವಾಗಬೇಕು. ಹೆಚ್ಚುವರಿಯಾಗಿ ಅಂಬ್ಯುಲೆನ್ಸ್ ವ್ಯವಸ್ಥೆ ಕಲ್ಪಿಸಬೇಕು. ಪ್ರತಿನಿತ್ಯ ಎರಡು ಬಾರಿ ಸ್ಯಾನಿಟೇಸೇಷನ್ ಮಾಡಬೇಕು. ಪಿಡಿಓಗಳು ಕೇಂದ್ರದಲ್ಲಿದ್ದು, ಕೋವಿಡ್ ನಿಯಂತ್ರಣಕ್ಕೆ ಮುಂದಾಗಬೇಕು ಎಂದು ಕಲ್ಲೇರುದ್ರೇಶ್ ಒತ್ತಾಯಿಸಿದರು.

ಸಂದರ್ಭದಲ್ಲಿ ಮುಖಂಡರಾದ ಕೌಸರ್, ಗ್ರಾ.ಪಂ ಮಾಜಿ ಅಧ್ಯಕ್ಷ ಕ್ಯಾಸನಹಳ್ಳಿ ಮಹಾಂತೇಶ್, ಉಸ್ಮಾನ್ ಅಲಿ, ಭೂಷಣ, ಅಜ್ಜಣ್ಣ, ಗ್ರಾ.ಪಂ. ಸದಸ್ಯ ಕಲ್ಲೇಶ್, ಸಿದ್ದೇಶ್, ಉಮಾಮಹೇಶ್, ಸತೀಶ್ ಇತರರು ಇದ್ದರು.

## ಚಂಪಾ ನಿಧನಕ್ಕೆ ಶರಣರ ಸಂತಾಪ




ಚಿತ್ರದುರ್ಗ, ಜ. 11- ಕನ್ನಡ ನಾಡು - ನುಡಿ ಅಭಿವೃದ್ಧಿಯ ಹೆಸರಾಂತ ಹೋರಾಟಗಾರ; ದಲಿತ-ಬಂಡಾಯ ಧ್ವನಿತ ಪ್ರಗತಿಪರ ಚಿಂತಕ; ಪತ್ರಿಕಾ ಸಂಪಾದಕ; ಹಿರಿಯ ಸಾಹಿತಿಗಳೂ ಆದ ಪ್ರೊ. ಚಂದ್ರಶೇಖರ ಪಾಟೀಲ್ ನಿಧನಕ್ಕೆ ಡಾ. ಶಿವಮೂರ್ತಿ ಮುರುಘಾ ಶರಣರು ಸಂತಾಪ ವ್ಯಕ್ತಪಡಿಸಿದ್ದಾರೆ.

ಕನ್ನಡ ನಾಡು, ನುಡಿಯನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಚಂಪಾರವರು ಗೋಕಾಕ್ ಚಳುವಳಿಯಲ್ಲಿ ಮುಂಚೂಣಿಯಲ್ಲಿ ಕೆಲಸ ಮಾಡಿದವರು. ಕನ್ನಡಕ್ಕೆ ಎಲ್ಲಿಯೇ ಅನ್ಯಾಯವಾದರೂ ಧ್ವನಿ ಎತ್ತುತ್ತಿದ್ದರು. ಅವರ ಅಗಲಿಕೆಯಿಂದ ನಾಡು ಓರ್ವ ಹೋರಾಟಗಾರನನ್ನು ಕಳೆದುಕೊಂಡಿದೆ ಎಂದು ಶರಣರು ತಿಳಿಸಿದ್ದಾರೆ.

ಚಂಪಾರ ಸಾಹಿತ್ಯ ರಚನೆ ಮತ್ತು ಜೀವಿತಾವಧಿಯ ಹೋರಾಟಗಳು 12ನೇ ಶತಮಾನದ ಬಸವಾದಿ ಶರಣರ ಚಳವಳಿಯ ಆಶಯಗಳಿಗೆ ಅನುಗುಣವಾಗಿರುವುದನ್ನು ಗುರುತಿಸಿ, ಶ್ರೀ ಮುರುಘಾ ಮಠವು 2018ರಲ್ಲಿ ಬಸವಶ್ರೀ ಪ್ರಶಸ್ತಿ ನೀಡಿ ಗೌರವಿಸಿದ್ದನ್ನು ಸ್ಮರಿಸಿರುವ ಶರಣರು, ಮೌಢ್ಯ, ಪುರೋಹಿತ್ಯ ಮತ್ತು ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧದ ನಿರಂತರ ಪ್ರತಿಭಟನೆಗಳ ಹರಿಕಾರರಾಗಿ ಪ್ರಖರ ವೈಜ್ಞಾನಿಕ ಚಿಂತಕರಾಗಿ ಎಲ್ಲ ಜನವರ್ಗದಲ್ಲಿ ಚಿರಪರಿಚಿತರಾಗಿದ್ದರು. ಹಾಸ್ಯ, ವಿಡಂಬನೆ ಮತ್ತು ನೇರ-ನಿಷ್ಠೂರ ನುಡಿ ನಡೆಯವರಾಗಿದ್ದರು ಎಂದಿದ್ದಾರೆ.

## ಪಾಲುಗಾರಿಕೆ ನೀಡಲು ವೊಡ ಪ್ರಸ್ತಾಪ

(1ನೇ ಪುಟದಿಂದ) ಸರ್ಕಾರ ಕಂಪನಿಯ ಅತಿ ದೊಡ್ಡ ಪಾಲುದಾರನಾಗಲಿದೆ.

ನಿನ್ನೆ ನಡೆದ ಕಂಪನಿಯ ನಿರ್ದೇಶಕ ಮಂಡಳಿ ಸಭೆಯಲ್ಲಿ ಸ್ಪೆಕ್ಟ್ರಮ್ ಹರಾಜು ಕಂತು ಹಾಗೂ ಎ.ಜಿ.ಆರ್. ಬಾಕಿಗಳ ಮೇಲಿನ ಎಲ್ಲ ಬಡ್ಡಿಯನ್ನು ಪಾಲುಗಾರಿಕೆಯಾಗಿ ಪರಿವರ್ತಿಸಲು ಸಮ್ಮತಿಸಲಾಗಿದೆ. ಪ್ರಸಕ್ತ ಬಡ್ಡಿಯ ಮೌಲ್ಯ 16 ಸಾವಿರ ಕೋಟಿ ರೂ. ಆಗಿದೆ ಎಂಬುದು ಕಂಪನಿಯ ಅಂದಾಜು. ಈ ಅಂದಾಜಿಗೆ ಟೆಲಿಕಾಂ ಇಲಾಖೆ ಒಪ್ಪಿಗೆ ನೀಡಬೇಕಿದೆ.

ಬಡ್ಡಿಯನ್ನು ನಾಲ್ಕು ವರ್ಷಗಳ ಕಾಲ ಮುಂದೂಡಿ ಪಾವತಿಸಲು ಇಲ್ಲವೇ ಈ ಮೊತ್ತವನ್ನು ಪಾಲುಗಾರಿಕೆಯಾಗಿ ಪರಿವರ್ತಿಸಲು ಸರ್ಕಾರ ಆಯ್ಕೆ ನೀಡಿತ್ತು.

ಸೆಪ್ಟೆಂಬರ್ 30, 2021ರವರೆಗೆ ಕಂಪನಿ 1,94,780 ಕೋಟಿ ರೂ. ಗಳ ಸಾಲ ಬಾಕಿ ಹೊಂದಿದೆ. ಇದರಲ್ಲಿ ಮುಂದೂಡಿಕೆಯಾದ ಸ್ಪೆಕ್ಟ್ರಮ್ ಪಾವತಿ 1,08,610 ಕೋಟಿ ರೂ., ಎ.ಜಿ.ಆರ್. ಹೊಣೆಗಾರಿಕೆ 63,400 ಕೋಟಿ ರೂ. ಹಾಗೂ ಬ್ಯಾಂಕ್ ಮತ್ತಿತರೆ ಹಣಕಾಸು ಸಂಸ್ಥೆಗಳ ಬಾಕಿ 22,770 ಕೋಟಿ ರೂ. ಆಗಿದೆ. ಪ್ರತಿ ಷೇರಿಗೆ 10 ರೂ. ಮೌಲ್ಯದಂತೆ ಪಾಲುಗಾರಿಕೆ ನೀಡುವುದಾಗಿ ಕಂಪನಿ ಪ್ರಸ್ತಾಪಿಸಿದೆ.

ಕಂಪನಿಯ ಪ್ರಸ್ತಾಪದಂತೆ ಮುಂದುವರೆದಲ್ಲಿ, ಸರ್ಕಾರ ಶೇ.35.8ರ ಪಾಲುಗಾರಿಕೆ ಹೊಂದಲಿದೆ. ವೊಡಫೋನ್ ಸಮೂಹ ಶೇ.28.5 ಮತ್ತು ಆದಿತ್ಯ ಬಿರ್ಲಾ ಸಮೂಹ ಶೇ.17.8ರಷ್ಟು ಪಾಲುಗಾರಿಕೆ ಹೊಂದಲಿದೆ. ಪ್ರಸಕ್ತ ಬಿ.ಎಸ್.ಇ. ಷೇರು ಸೂಚ್ಯಂಕದಲ್ಲಿ ವಿ.ಐ.ಎಲ್. ಮೌಲ್ಯ ಪ್ರತಿ ಷೇರಿಗೆ 12.55 ರೂ.ಗಳಷ್ಟಿದೆ.

## ರಾಣೇಬೆನ್ನೂರು ಬಂದ್‌ಗೆ ಕರೆ

(1ನೇ ಪುಟದಿಂದ) ನಿರ್ಮಾಣ ಖಂಡಿಸಿ ನಿಂತಿದ್ದ ನೀರಿನಲ್ಲಿ ತೆಪ್ಪದ ಮೂಲಕ ಬಾಗಿನ ಅರ್ಪಿಸಿ ವಿನೂತನವಾಗಿ ಪ್ರತಿಭಟಿಸಿದರು.


ಕೆಳ ಸೇತುವೆಯ ಅವೈಜ್ಞಾನಿಕ ನಿರ್ಮಾಣ ಖಂಡಿಸಿ ನಿಂತಿದ್ದ ನೀರಿನಲ್ಲಿ ತೆಪ್ಪದ ಮೂಲಕ ಬಾಗೀನ ಅರ್ಪಿಸಿ ವಿನೂತನ ಪ್ರತಿಭಟನೆ

ಮೇಲ್ಸೇತುವೆ ನಿರ್ಮಾಣಕ್ಕೆ ಒತ್ತಾಯಿಸಿ ತಹಶೀಲ್ದಾರರ ಮೂಲಕ ಮನವಿ ಸಲ್ಲಿಸಿರುವ ಅವರು, ನಿರ್ಮಾಣ ವಿಳಂಬವಾಗಲು ರಾಜಕೀಯ ಇಚ್ಛಾಶಕ್ತಿ ಇರದ ಈ ಭಾಗದ ಜನಪ್ರತಿನಿಧಿಗಳು ಮತ್ತು ಆಮೆಯಂತೆ ಅಧಿಕಾರ ನಡೆಸುತ್ತಿರುವ ಅಧಿಕಾರಿಗಳೇ ಕಾರಣ ಎಂದು ದೂರಿದರು.

ಕಳೆದ ತಿಂಗಳು ಈ ಬ್ರಿಡ್ಜ್‌ನಲ್ಲಿ ನಿಂತ ನೀರಿನಲ್ಲಿ ಬಸ್‌ವೊಂದು ಮುಳುಗಿದಾಗ, 70 ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದರು. ರೈತರು ಬೆಳೆದ ಮಾಲನ್ನು ಮಾರುಕಟ್ಟೆಗೆ ತರುವಾಗ ಪಲ್ಟಿಯಾಗಿ ಅನಾಹುತ ಸಂಭವಿಸಿತ್ತು. ಬೈಕ್ ಸವಾರರು ದಿನನಿತ್ಯ ಬಿದ್ದು ಏಳುತ್ತಾ ಮುಂದೆ ಸಾಗುತ್ತಿರುವ ಪ್ರಕರಣಗಳು ನಡೆಯುತ್ತಿವೆ. ಆದರೂ, ಈ ಭಾಗದ ಸಂಸತ್ ಸದಸ್ಯರು ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಆಕ್ಷೇಪಿಸಿದರು.

ನ್ಯಾಯವಾದಿ ಎಸ್.ಡಿ. ಹಿರೇಮಠ ಮಾತನಾಡಿ, ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರ ವಿದೆ. ಇಂತಹ ಯೋಜನೆಗಳನ್ನು ಮಾಡುವುದಕ್ಕೆ ಕಷ್ಟವೇನಲ್ಲ. ಆದರೆ, ಜನಪ್ರತಿನಿಧಿಗಳಲ್ಲಿ, ಅಧಿಕಾರಿಗಳಲ್ಲಿ ಇಚ್ಛಾಶಕ್ತಿ ಇರಬೇಕು ಎಂದರು.

ಪ್ರತಿಭಟನೆಯಲ್ಲಿ ಗುಡ್ಡದ ಆನವೇರಿ ವಿರಕ್ತ ಮಠದ ಶಿವಯೋಗಿಶ್ವರ ಮಹಾಸ್ವಾಮೀಜಿ, ಜಿಲ್ಲಾ ಕಾರ್ಮಿಕ ಸಂಘದ ಅಧ್ಯಕ್ಷರಾದ ಬಸವರಾಜ ಕೊಂಗಿ ಮಾತನಾಡಿದರು.

ಹೋರಾಟ ಸಮಿತಿಯ ಗದಿಗೆಪ್ಪ ಹೊಟ್ಟಿಗೌಡರ, ಪ್ರಭುಸ್ವಾಮಿ ಕರ್ಜಿಮಠ, ಉಮೇಶಣ್ಣಾ ಹೊನ್ನಾಳಿ, ಜಗದೀಶ ಕೆರೂಡಿ, ಇಕ್ಬಾಲ್‌ಸಾಬ್ ರಾಣೇಬೆನ್ನೂರು, ತುಕ್ಕೆಪ್ಪ ಲಮಾಣಿ, ಶಿವಪುತ್ರಪ್ಪ ಮಲ್ಲಾಡದ, ರಾಜು ಓಲೇಕಾರ, ರವಿ ಕೆರೂಡಿ, ಎನ್.ಎಸ್. ಕುಲಕರ್ಣಿ, ಧರ್ಮಣ್ಣ ಕುಪ್ಪೇಲೂರ, ಕೇಶವ ಹದಡಿ ಮುಂತಾದವರು ಭಾಗವಹಿಸಿದ್ದರು. ತಹಶೀಲ್ದಾರ ಶಿದ್ದನಗೌಡ್ರ ಪ್ರತಿಭಟನಾ ಸ್ಥಳಕ್ಕೆ ಮನವಿ ಸ್ವೀಕರಿಸಿ ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಶೀಘ್ರ ಕಳುಹಿಸಿಕೊಡಲಾಗುವುದೆಂದು ಭರವಸೆ ನೀಡಿದರು.

## ಭರಮಸಾಗರ-ತುಪ್ಪದಹಳ್ಳಿ ಕೆರೆಗಳಿಗೆ ನೀರು

(1ನೇ ಪುಟದಿಂದ) ಸಂಗ್ರಹವಾಗುವ ಸಾಮರ್ಥ್ಯವಿದೆ. 18ಅಡಿ ಆಳವಿರುವ ಈ ಕೆರೆಗೆ ಈ ಸಲ ಮಳೆಯಿಂದಲೂ ಸಾಕಷ್ಟು ನೀರು ಬಂದಿದೆ. ಜೊತೆಗೆ ಭರಮಸಾಗರ ಕೆರೆಯ ಕೋಡಿಯಿಂದಲೂ ಹರಿಯುತ್ತಿರುವ ನೀರಿನಿಂದ ಈಗಾಗಲೇ 12 ಅಡಿಯಷ್ಟು ನೀರು ತುಂಬಿದೆ. ಈಗ ಕಣ್ಣಾಯಿಸಿದಷ್ಟು ದೂರದೂರಕೆ ನೀರಿನ ಹರಿವು ಕಾಣುತ್ತಿದ್ದು, ಈ ಭಾಗದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ ಎಂದು ಶ್ರೀಗಳು ಸುದ್ದಿಗಾರರೊಂದಿಗೆ ಮಾತನಾಡಿದರು.

**13ರಂದು ಎರಡೂ ಕೆರೆಗಳಿಗೆ ಶ್ರೀಗಳ ಭೇಟಿ:** ತುಂಬಿ ತುಳುಕುತ್ತಿರುವ ಭರಮಸಾಗರ ದೊಡ್ಡ ಕೆರೆಯ ನಯನ ಮನೋಹರ ದೃಶ್ಯವನ್ನು ಕಣ್ತುಂಬಿಕೊಳ್ಳುವ ಕಾತುರ ಶ್ರೀಗಳವರದು. ಆದುದರಿಂದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಇದೇ ತಿಂಗಳ ಮೂರರ ಗುರುವಾರ ಬೆಳಿಗ್ಗೆ 11ಕ್ಕೆ ಭರಮಸಾಗರ ಕೆರೆಯ ವೀಕ್ಷಣೆಗಾಗಿ ಆಗಮಿಸುತ್ತಿದ್ದಾರೆ. ಅಲ್ಲಿಂದ ಮುಂದೆ ಬಿಳಿಚೋಡು ಮಾರ್ಗವಾಗಿ ತುಪ್ಪದಳ್ಳಿ ಕೆರೆಗೆ ತೆರಳುವರು. ಅಲ್ಲಿ ಕೆರೆಯನ್ನು ವೀಕ್ಷಿಸಿ, ಅಭಿವೃದ್ಧಿ ಕಾರ್ಯಗಳನ್ನು ಕುರಿತು ಚರ್ಚಿಸುವರು. ಈ ಸಂದರ್ಭದಲ್ಲಿ ಜಗಳೂರು ಶಾಸಕ ಎಸ್ ವಿ ರಾಮಚಂದ್ರಪ್ಪ, ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ ಗುಂಗೆ, ಏತ ನೀರಾವರಿಯ ಮುಖ್ಯ ಎಂಜಿನಿಯರ್ ಮಲ್ಲಪ್ಪನವರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಭಾಗವಹಿಸುವರು. ಎಂದು ಬೃಹನ್ಮಠದ ಕಾರ್ಯದರ್ಶಿ ಪತ್ರಿಕೆ ಹೇಳಿಕೆ ನೀಡಿದ್ದಾರೆ.


**REQUIRED TELECALLERS**
Contact : 96066 92888
96066 91888
82963 76716
Location : Davangere

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ. SSLC, PUC Degree, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 94837 64859

**GOLD SHOP FURNITURE ಮಾರಾಟಕ್ಕೆ ಇವೆ**
1) AC Machine - 2
2) Godrej Locker Door-1 (7x3)
3) CC Camara-6, 4) TV-1
5) Entrance Glass Door-2 (8x3)
6) Gold Disply Rubber Wood Counters Lamination-4, 7) Disply Mirror-2
8) ಅಲ್ಯೂಮಿನಿಯಂ ಷೋಕೇಸ್-2
9) 16 Draws, 16 ಸೆಲ್ಫ್ with Lighiting
10) Marbal Cash Counter - 1
ಹೊಸದಾಗಿ ಜ್ಯುಯಲರಿ ಶಾಪ್ ಮಾಡಲು FURNITURES ಅನುಕೂಲತೆ ಇದೆ.
99451 59582
99451 99770

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ಸಿಟಿ ಕೊಂಡಜ್ಜಿ ರಸ್ತೆ ಬಲ ಭಾಗ ಅಶೋಕ ನಗರದಲ್ಲಿ ಬರತಕ್ಕ ಉತ್ತರ ದಿಕ್ಕಿಗೆ ಮುಖವಾಗಿರುವ ಸೈಟ್ ನಂ. 69 ಅಳತೆ : 30x42 ಅಡಿವುಳ್ಳ ರೆವಿನ್ಯೂ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
ಮೊ: 89703 96509

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
90080 55813


## ಮೇಕೆದಾಟು ಜಾರಿಯಾಗಲೇ ಬೇಕು

(1ನೇ ಪುಟದಿಂದ) ನಿಮ್ಮವರೇ ಇದ್ದಾರೆ, ರಾಜ್ಯದಿಂದ 25 ಜನ ಸಂಸದರನ್ನು ಜನ ಬಿಜೆಪಿಯ ಸಂಸದರನ್ನು ಜನ ಆರಿಸಿ ಕಳುಹಿಸಿದ್ದಾರೆ. ಇನ್ನೂ ಯಾಕೆ ಯೋಜನೆ ಜಾರಿ ಮಾಡಿಲ್ಲ ಎಂದವರು ಪ್ರಶ್ನಿಸಿದ್ದಾರೆ.

ಕೊರೊನಾ ಇದೆ, ನಿಯಮ ಪಾಲನೆ ಮಾಡಿಲ್ಲ ಎಂದು ನಾನು ಸೇರಿದಂತೆ ಪಕ್ಷದ 30 ಜನರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಇದಕ್ಕೆಲ್ಲ ನಾವು ಹೆದರಲ್ಲ. ಹೀಗೆ ಕೇಸ್ ಹಾಕಿ ನಮ್ಮನ್ನು ಹೆದರಿಸಬಹುದು ಎಂದಕೊಂಡರೆ ಬಿಜೆಪಿಯವರಂತ ಮೂರ್ಖರು ಯಾರೂ ಇಲ್ಲ ಎಂದವರು ಹೇಳಿದ್ದಾರೆ.

ಸಾವಿರಾರು ಜನ ಸೇರಿಸಿ ಪ್ರತಿಭಟನೆ ಮಾಡಿದ ಸುಭಾಷ್ ಗುತ್ತೇದಾರ ಅವರ ಮೇಲೆ ಕೇಸ್ ಹಾಕಿದ್ದಾರಾ ? ಶೋಭಾ ಕರಂದ್ಲಾಜೆ, ರೇಣುಕಾಚಾರ್ಯ, ಭಗವಂತ್ ಖೂಬಾ ಇವರೆಲ್ಲರ ಮೇಲೂ ಕೇಸ್ ಹಾಕಿದ್ದಾರಾ? ಗೃಹ ಸಚಿವರ ಕ್ಷೇತ್ರ ತೀರ್ಥಹಳ್ಳಿಯಲ್ಲೇ ದೊಡ್ಡ ಜಾತ್ರೆ ನಡೆಯಿತು, ಸ್ವತಃ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಲ್ಕೈದು ಸಾವಿರ ಜನ ಸೇರಿಸಿ ವಿಧಾನ ಪರಿಷತ್ ಸದಸ್ಯರ ಪ್ರಮಾಣ ವಚನ ಕಾರ್ಯಕ್ರಮ ನಡೆಸಿದರು. ಇವೆಲ್ಲಾ ಮಾಡುವಾಗ ಕೊರೊನಾ ಮೂರನೇ ಅಲೆ ಇರಲಿಲ್ಲವೇ ? ಇದರಿಂದ ಸರ್ಕಾರದ ದುರುದ್ದೇಶ ಗೊತ್ತಾಗುತ್ತೆ ಎಂದವರು ಹೇಳಿದ್ದಾರೆ.


**ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ದೈವಶಕ್ತಿ ಜ್ಯೋತಿಷರು**
ಪಂ. ಮಂಜುನಾಥ ಭಟ್, ನಂ.1 ವಶೀಕರಣ ಸ್ಪೆಷಲಿಸ್ಟ್ ಸಮಸ್ಯೆ, ವಿದ್ಯೆ, ಉದ್ಯೋಗ, ಆರೋಗ್ಯ ಹಣಕಾಸು, ಸಾಲಬಾಧೆ, ಮಾಟ-ಮಂತ್ರ, ವಿ ಸೂ: ಸ್ತ್ರೀ- ಪುರುಷ ವಶೀಕರಣಕ್ಕೆ ಕೇವಲ 3ದಿನಗಳಲ್ಲಿ ಪರಿಹಾರ ಶತಸಿದ್ಧ, ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ
94497 96933

**ಬೆಳ್ಳಿ ಫೋಟೋಗಳು ಹೋಲ್‌ಸೇಲ್‌ನಲ್ಲಿ ಸಿಗುತ್ತವೆ**
ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಬೆಳ್ಳಿ ದೇವರ ಮೂರ್ತಿಗಳ ಫೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ, ಸರಸ್ವತಿ, ಕನ್ನಿಕಾ ಪರಮೇಶ್ವರಿ, ಸತ್ಯ ನಾರಾಯಣ ಸ್ವಾಮಿ, ಧರ್ಮಸ್ಥಳ ಮಂಜುನಾಥ ಸ್ವಾಮಿ, ಶಿವ ಪಾರ್ವತಿ, ರಾಘವೇಂದ್ರ, ಆಂಜನೇಯ, ಶಿರಡಿ ಸಾಯಿಬಾಬಾ, ಈಶ್ವರ ಲಿಂಗ, ಮೈಲಾರ ಲಿಂಗೇಶ್ವರ, ವೀರಭದ್ರಸ್ವಾಮಿ, ಚಾಮುಂಡೇಶ್ವರಿ, ರೇಣುಕಾ ಯಲ್ಲಮ್ಮ, ಗುರು ಕೊಟ್ಟೂರೇಶ್ವರ ಸ್ವಾಮಿ, ಅಂಬಾಭವಾನಿ, ಅಂಗಡಿ ಪ್ರಾರಂಭಿಸಲು ಪೂಜೆ ಮಾಡುವ ವೈಟ್ ಮೆಟಲ್‌ನ ಸರ್ವಾಲಂ ಕಾರದ (ಲೈಟಿಂಗ್) ಫೋಟೋಗಳು ದೊರೆಯುತ್ತವೆ.
ಲಕ್ಷ್ಮಿ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್ಸ್
ಮಳಿಗೆ ನಂ.34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
99451 59582


## ನಿರ್ಧಾರ ಡಿಸಿಗೆ


(1ನೇ ಪುಟದಿಂದ) ಸಾಮಾನ್ಯ ಆರೋಗ್ಯ ತಪಾಸಣೆ ನಡೆಸಲು ಸೂಚಿಸಲಾಗುವುದು ಎಂದವರು ತಿಳಿಸಿದ್ದಾರೆ.

ಮಾರುಕಟ್ಟೆಯಲ್ಲಿ ಜನ ಸಂದಣಿ ಕಡಿಮೆ ಮಾಡಲು, ಮಾಸ್ಕ್ ಧರಿಸಲು ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಜನರ ಮನವೊಲಿಸಲು ಜನರಿಗೆ ತಿಳಿವಳಿಕೆ ನೀಡಲಾಗುವುದು. ಜನರು ಪ್ರತಿಭಟನೆ, ಪ್ರದರ್ಶನಗಳಿಗೆ ಸೇರದಂತೆ ಕ್ರಮ ತೆಗೆದುಕೊಳ್ಳುವಂತೆ ಪೊಲೀಸರಿಗೆ ಸೂಚಿಸಲಾಗುವುದು ಎಂದು ಸಚಿವ ಜ್ಞಾನೇಂದ್ರ ಹೇಳಿದ್ದಾರೆ.

ವೈಕುಂಠ ಏಕಾದಶಿ ಹಾಗೂ ಸಂಕ್ರಾಂತಿ ಸಂದರ್ಭದಲ್ಲಿ ಕೊರೊನಾ ನಿಯಮಗಳು ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ದೇವಾಲಯಗಳಲ್ಲಿ ನಿಯಮ ಉಲ್ಲಂಘನೆಯಾದರೆ ಪ್ರಕರಣ ದಾಖಲಿಸಲಾಗುವುದು ಎಂದವರು ತಿಳಿಸಿದ್ದಾರೆ.


॥ ಶ್ರೀ ಬನಶಂಕರಿ ದೇವಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ**



ದಾವಣಗೆರೆ ತಾಲ್ಲೂಕು, ಆಲೂರು ಗ್ರಾಮದ ವಾಸಿ
ಶ್ರೀಮತಿ ಪ್ರಮೀಳಮ್ಮ ಮತ್ತು ಮಕ್ಕಳು
ಮಾಡುವ ವಿಜ್ಞಾಪನೆಗಳು.
ದಿನಾಂಕ : 31.12.2021ನೇ ಶುಕ್ರವಾರ ಬೆಳಿಗ್ಗೆ 6.50ಕ್ಕೆ ನಮ್ಮ ಪೂಜ್ಯ ಪತಿಯವರಾದ
**ಶ್ರೀ ಡಿ.ಎಂ. ಬಸಪ್ಪ**
(ಅಂಚೆ ಇಲಾಖೆ) ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ" ಯನ್ನು
ದಿನಾಂಕ : 12.01.2022ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಆಲೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಮೃತರ ಧರ್ಮಪತ್ನಿ : ಶ್ರೀಮತಿ ಪ್ರಮೀಳಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ದುಂಡಪ್ಪ ವಂಶಸ್ಥರು, ಅಳಿಯಂದಿರು ಹಾಗೂ ಬಂಧು-ಮಿತ್ರರು, ಫೋ. : 78899 23279

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 29.12.2021ರಂದು ನಿಧನರಾದ
ದೈವಜ್ಞ ಶ್ರೀ ಗಣೇಶೋತ್ಸವ ಸಮಿತಿ ನಿರ್ದೇಶಕರಾಗಿದ್ದ
**ಲಕ್ಷ್ಮಣ ಆರ್. ವೇರ್ಣೇಕರ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಅಧ್ಯಕ್ಷರು ಮತ್ತು ಪದಾಧಿಕಾರಿಗಳು
ದೈವಜ್ಞ ಶ್ರೀ ಗಣೇಶೋತ್ಸವ ಸಮಿತಿ (ರಿ)
ಪಿ.ಬಿ. ರಸ್ತೆ, ದಾವಣಗೆರೆ.

**ಹಿರೇಮೇಗಳಗೆರೆ ಆಲೂರು ಪರಶುರಾಮಪ್ಪ ನಿಧನ**



ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು, ಹಿರೇಮೇಗಳಗೆರೆ ಗ್ರಾಮದ ವಾಸಿ
**ಶ್ರೀ ಆಲೂರು ಪರಶುರಾಮಪ್ಪ**
ಇವರು ದಿನಾಂಕ 11.1.2022 ರ ಮಂಗಳವಾರ ಸಂಜೆ 4.18ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಮೊಮ್ಮಕ್ಕಳು, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.1.2022ರ ಬುಧವಾರ ಮಧ್ಯಾಹ್ನ 12.30ಕ್ಕೆ ಮೃತರ ಜಮೀನಿನಲ್ಲಿ ನೆರವೇರಲಿದೆ.
ದುಃಖತಪ್ತ ಕುಟುಂಬ ವರ್ಗ: ಆಲೂರು ವಂಶಸ್ಥರು
ಮೊ: 98442 52813, 93806 11565

**ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ**
॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥



ದಾವಣಗೆರೆ ತಾ॥, ಜಿ॥ ಕಂದನಕೋವಿ ಗ್ರಾಮದ ವಾಸಿ
ಯಜಮಾನ್ ಶ್ರೀ ಕಂದನಕೋವಿ ಬೆಳ್ಳೂಡಿ ಮುದ್ದಪ್ಪ ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ : 08.01.2022ನೇ ಶನಿವಾರ ಬೆಳಗಿನ ಜಾವ 4.45ಕ್ಕೆ ನನ್ನ ಸಹೋದರ
**ಶ್ರೀ ಯಜಮಾನ್ ಕಂದನಕೋವಿ ಬೆಳ್ಳೂಡಿ ಚಂದ್ರಶೇಖರಪ್ಪ**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ: 12.01.2022ನೇ ಬುಧವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾ॥ ಕಂದನಕೋವಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು
ಯಜಮಾನ್ ಶ್ರೀ ಕಂದನಕೋವಿ ಬೆಳ್ಳೂಡಿ ಮುದ್ದಪ್ಪ ಮತ್ತು ಸಹೋದರರು ಮೃತರ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಬೆಳ್ಳೂಡಿ ವಂಶಸ್ಥರು ಮತ್ತು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
ಮೊ: 97411 01041, 94494 32924, 90088 25804

# ಸಾಲ ವಿತರಣೆಯಲ್ಲಿ ಪ್ರಗತಿ ಸಾಧಿಸಲು ಕರೆ

## ಲೀಡ್ ಬ್ಯಾಂಕ್ ಪುನರಾವಲೋಕನ ಸಮಿತಿ ಸಭೆಯಲ್ಲಿ ಜಿ.ಪಂ. ಸಿಇಒ ದಾನಮ್ಮನವರ

ದಾವಣಗೆರೆ, ಜ.11- ಬ್ಯಾಂಕ್ ಅಧಿಕಾರಿಗಳು ಸಾಲ ವಿತರಣೆ ಗುರಿಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಶ್ರಮಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ. ವಿಜಯ ಮಹಾಂತೇಶ ದಾನಮ್ಮನವರ ಸೂಚಿಸಿದರು.

ಜಿ.ಪಂ. ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಲೀಡ್ ಬ್ಯಾಂಕ್ ಜಿಲ್ಲಾಮಟ್ಟದ ಪುನರಾವಲೋಕನ ಸಮಿತಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಬ್ಯಾಂಕುಗಳು ಇತರ ಆದ್ಯತಾ ವಲಯಗಳಲ್ಲಿ ಬರುವ ವಸತಿ, ಶಿಕ್ಷಣ ಇನ್ನಿತರ ಕ್ಷೇತ್ರಗಳಲ್ಲಿ ಹೆಚ್ಚಿನ ಸಾಲ ವಿತರಣಾ ಪ್ರಗತಿಗೆ ಹೆಚ್ಚು ಒತ್ತು ಕೊಡುವಂತೆ ಹೇಳಿದರು.

ಲೀಡ್ ಬ್ಯಾಂಕ್ ವಿಭಾಗೀಯ ವ್ಯವಸ್ಥಾಪಕ ಸುಶೃತ್ ಶಾಸ್ತ್ರಿ ಮಾತನಾಡುತ್ತಾ, ಎರಡು ವರ್ಷಗಳಿಂದ ಇತರ ಆದ್ಯತಾ ವಲಯದ ಗುರಿಯನ್ನು ಕಡಿಮೆ ಮಾಡಿದ್ದರೂ ಸಾಲ ನೀಡಿಕೆ ಸುಧಾರಣೆಯಾಗುತ್ತಿಲ್ಲ ಎಂದು ಹೇಳಿದರು.

ವಸತಿ ಸಾಲ ಮಂಜೂರು ಮಾಡಬೇಕಾದರೆ ಅರ್ಜಿದಾರರು ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ನೀಡಬೇಕಾಗುತ್ತದೆ. ಆದರೆ ಉಪ ನೋಂದಣಾಧಿಕಾರಿ ಕಚೇರಿಯಿಂದ ಆ ಪ್ರಮಾಣಪತ್ರ ಬರಲು ವಿಳಂಬವಾಗುತ್ತಿದ್ದು, ಈ ಕಾರಣಕ್ಕೆ ಮಂಜೂರಾತಿ ನಿಧಾನವಾಗುತ್ತಿದೆ ಎಂದು ಬ್ಯಾಂಕ್ ಅಧಿಕಾರಿಗಳು ವಿವರಿಸಿದರು.

ಜಿ.ಪಂ. ಸಿಇಒ ಮಾತನಾಡಿ, ಈ ಬಗ್ಗೆ ಕ್ರಮ ಕೈಗೊಳ್ಳಲು ಉಪ ನೋಂದಣಾಧಿಕಾರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು. ಶಿಕ್ಷಣ ಸಾಲ ನೀಡಿಕೆಯೂ ವಿಳಂಬವಾಗದಂತೆ ನೋಡಿಕೊಳ್ಳಬೇಕು ಎಂದು ಸುಶೃತ್ ಶಾಸ್ತ್ರಿ ಹೇಳಿದರು.

**7970 ಕೋಟಿ ಸಾಲದ ಕರಡು ಯೋಜನೆ:** ಜಿಲ್ಲೆಯ ಬ್ಯಾಂಕುಗಳಿಂದ 2022-23ನೇ ಸಾಲಿನಲ್ಲಿ 7970 ಕೋಟಿ ರೂ.ಗಳ ಸಾಲ ನೀಡಲು ಯೋಜಿಸಲಾಗಿದೆ. ಅದರಲ್ಲಿ ಕೃಷಿಗೆ 4307 ಕೋಟಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಗೆ 1193 ಕೋಟಿ ರೂ.ಗಳು ಸೇರಿವೆ ಎಂದು ಲೀಡ್ ಬ್ಯಾಂಕ್ ವಿಭಾಗೀಯ ವ್ಯವಸ್ಥಾಪಕ ಸುಶೃತ್ ಶಾಸ್ತ್ರಿ ಸಭೆಯಲ್ಲಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಬ್ಯಾಂಕುಗಳ ಸಾಲ ಮತ್ತು ಠೇವಣಿ ಅನುಪಾತ ಕಡಿಮೆ ಇರುವ ಬಗ್ಗೆಯೂ ಸಭೆಯಲ್ಲಿ ಚರ್ಚೆಗೆ ಬಂದಿತು. ಭಾರತೀಯ ರಿಜರ್ವ್ ಬ್ಯಾಂಕಿಗೆ ವರದಿ ನೀಡಬೇಕಿರುವುದರಿಂದ ಸುಧಾರಣೆ ಮಾಡಿಕೊಳ್ಳಿ ಎಂದು ಬ್ಯಾಂಕ್ ಅಧಿಕಾರಿಗೆ ಸಿಇಒ ಸೂಚಿಸಿದರು.

ನಬಾರ್ಡ್‌ನ 2022-23ನೇ ಸಾಲಿನ ಸಾಲ ಯೋಜನೆಯನ್ನು ಬಿಡುಗಡೆ ಮಾಡಲಾಯಿತು. ನಬಾರ್ಡ್‌ನ ಎ.ಜಿ.ಎಂ. ವಿ. ರವೀಂದ್ರ, ಕೆನರಾ ಬ್ಯಾಂಕ್ ವಿಭಾಗೀಯ ವ್ಯವಸ್ಥಾಪಕ ಬಿ.ಜಿ. ದೊಡ್ಡಮನಿ ಇತರರು ಉಪಸ್ಥಿತರಿದ್ದರು.

### ಆಹಾರ ಸಂಸ್ಕರಣಾ ಘಟಕ: 2ನೇ ಸ್ಥಾನದಲ್ಲಿ ಜಿಲ್ಲೆ

**ಆತ್ಮನಿರ್ಭರ ಭಾರತ ಅಭಿಯಾನದಡಿ ಕೇಂದ್ರ ಸರ್ಕಾರ ಆಹಾರ ಸಂಸ್ಕರಣೆ ಉದ್ಯಮಗಳಿಗೆ ಪ್ರೋತ್ಸಾಹಿಸುತ್ತಿದ್ದು ಅಂಥ ಘಟಕಗಳ ಸ್ಥಾಪನೆಗೆ ಸಾಲಕ್ಕಾಗಿ ಸಲ್ಲಿಸಿದ ಅರ್ಜಿಗಳನ್ನು ವಿಲೇವಾರಿ ಮಾಡುವಲ್ಲಿ ಬೆಂಗಳೂರು ನಗರ ಜಿಲ್ಲೆಯ ನಂತರ ದಾವಣಗೆರೆ ಜಿಲ್ಲೆಯು ರಾಜ್ಯದಲ್ಲಿ 2ನೇ ಸ್ಥಾನದಲ್ಲಿದೆ. ಆದರೆ ತಿರಸ್ಕೃತ ಅರ್ಜಿಗಳ ಸಂಖ್ಯೆ ಹೆಚ್ಚಾಗಿದೆ ಎಂದು ಜಿ.ಪಂ. ಸಿಇಒ ವಿಜಯ ಮಹಾಂತೇಶ ಹೇಳಿದರು.**

# ಅಕ್ರಮ ಕಲ್ಲು ಗಣಿಗಾರಿಕೆ: ಕ್ರಮಕ್ಕೆ ಆಗ್ರಹ

## ನಗರದಲ್ಲಿ ಸಮಾಜ ಪರಿವರ್ತನ ಸಮುದಾಯ ಸಂಚಾಲಕ ಎಸ್.ಆರ್. ಹಿರೇಮಠ



ದಾವಣಗೆರೆ, ಜ.11- ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲ್ಲೂಕು ಚಟ್ನಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸಿರುವ ಮೆ.ಜಿ.ಎಂ. ಶುಗರ್ ಮತ್ತು ಎನರ್ಜಿ ಲಿಮಿಟೆಡ್ ಕಂಪನಿ ಹಾಗೂ ಮಾಲೀಕರ ವಿರುದ್ಧ ಶೀಘ್ರ ಕ್ರಮ ಕೈಗೊಳ್ಳುವಂತೆ ಸಮಾಜ ಪರಿವರ್ತನ ಸಮುದಾಯ ಸಂಚಾಲಕ ಎಸ್.ಆರ್. ಹಿರೇಮಠ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಟ್ನಳ್ಳಿ ಗ್ರಾಮದಲ್ಲಿ ಅನಧಿಕೃತವಾಗಿ ಕಲ್ಲುಗಣಿಗಾರಿಕೆ ಸಂಬಂಧ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳ ತಂಡ ಸ್ಥಳ ಪರಿಶೀಲನೆ ನಡೆಸಿ ಈಗಾಗಲೇ ವರದಿ ಸಲ್ಲಿಸಿದ್ದಾರೆ.

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹಿರೇಕೆರೂರು ಇಲ್ಲಿ ದೂರು ಸಲ್ಲಿಸಿ ದಾಸ್ತಾನು ಇರುವ 16080 ಮೆಟ್ರಿಕ್ ಟನ್ ಜಲ್ಲಿ ಹಾಗೂ 980 ಮೆಟ್ರಿಕ್ ಟನ್ ಕಟ್ಟಡ ಕಲ್ಲನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದುಕೊಂಡಿದ್ದು, ಹರಾಜು ಮೂಲಕ ವಿಲೇವಾರಿ ಮಾಡಲು ಅಗತ್ಯ ಕ್ರಮಕ್ಕೆ ಸೂಚಿಸಲಾಗಿದೆ.

ಅಲ್ಲದೇ, ಅನಧಿಕೃತವಾಗಿ ಉಪ ಖನಿಜ ತೆಗೆದು ಸಾಗಾಣಿಕೆ ಮಾಡಿರುವ ಪ್ರಮಾಣವನ್ನು ಡ್ರೋನ್ ಸಮೀಕ್ಷೆ ಮೂಲಕ ಅಂದಾಜಿಸಿ ಸದರಿ ಪ್ರಮಾಣಕ್ಕೆ ಕಾಂಪೌಂಡಿಂಗ್ ಶುಲ್ಕ ಮತ್ತು ರಾಜಧನ ಸಂಗ್ರಹಿಸಲು ಅಗತ್ಯ ಕ್ರಮ ಜರುಗಿಸಲೂ ಸಹ ಅಧಿಕಾರಿಗಳು ಸೂಚಿಸಿದ್ದಾರೆ. ಆದ್ದರಿಂದ ಕೂಡಲೇ ಅಧಿಕಾರಿಗಳು ಕ್ರಮ ಜರುಗಿಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವಕೀಲರಾದ ಅನೀಶ್ ಪಾಷಾ, ಎಂ.ಸಿ. ಹಾವೇರಿ, ಎನ್.ಸಿ. ದೊಡ್ಡಮನಿ, ಹುಸೇನ್ ಸಾಬ್ ಹಸನ್ ಸಾಬ್ ಬಿಲ್ಲಳ್ಳಿ ಉಪಸ್ಥಿತರಿದ್ದರು.

**ಕೃಷಿ ಕಾಯ್ದೆ ಹಿಂಪಡೆಯದಿದ್ದರೆ ರಾಜ್ಯಾದ್ಯಂತ ಜಾಥಾ :** ಕೇಂದ್ರ ಸರ್ಕಾರ ಜಾರಿಗೊಳಿಸಲುದ್ದೇಶಿಸಿದ್ದ ಮೂರು ಜನ ವಿರೋಧಿ ಕೃಷಿ ಕಾಯ್ದೆಗಳನ್ನು ಕರ್ನಾಟಕ ಸರ್ಕಾರವೂ ಕೂಡಲೇ ರದ್ದುಗೊಳಿಸಬೇಕು ಎಂದು ಎಸ್.ಆರ್. ಹಿರೇಮಠ ಒತ್ತಾಯಿಸಿದ್ದಾರೆ.

ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಜನಾಂದೋಲನಗಳ ಮಹಾ ಮೈತ್ರಿ, ಸಿಟಿಜನ್ ಫಾರ್ ಡೆಮಾಕ್ರಸಿ ಹಾಗೂ ಸಮಾನ ಮನಸ್ಕ ಸಂಘಟನೆಗಳೊಂದಿಗೆ ರಾಜ್ಯದಾದ್ಯಂತ ಜಾಗೃತಿ ಜಾಥಾ ನಡೆಸಿ, ಜನರ ಬೆಂಬಲ ಪಡೆದು ಬೇಡಿಕೆ ಈಡೇರುವವರೆಗೆ ಸರ್ಕಾರದ ಮೇಲೆ ಒತ್ತಡ ತರಲಾಗುವುದು ಎಂದು ಹೇಳಿದರು.

## ಸಾಸ್ವೇಹಳ್ಳಿ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

66/11 ಕೆವಿ ಸಾಸ್ವೇಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಲಿಲೋ ಕಾಮಗಾರಿ ಕಾರ್ಯವನ್ನು ಬೃಹತ್ ಕಾಮಗಾರಿ ವಿಭಾಗ ಕ.ವಿ.ಪ್ರ.ನಿ.ನಿ ದಾವಣಗೆರೆ ಇವರು ಹಮ್ಮಿಕೊಂಡಿರುವುದರಿಂದ ಕೆವಿ ಸಾಸ್ವೇಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಹಳ್ಳಿಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ಜಗಳೂರು ಸೌಂದರ್ಯೀಕರಣಕ್ಕೆ ಒತ್ತು ಶಾಸಕ ಎಸ್.ವಿ. ರಾಮಚಂದ್ರ ಭರವಸೆ



ಜಗಳೂರು, ಜ.11- ದ್ವಿಮುಖ ರಸ್ತೆ, ಹೈಮಾಸ್ಟ್ ದೀಪಗಳನ್ನು ಅಳವಡಿಸಿ, ಪಟ್ಟಣದ ಸೌಂದರ್ಯೀಕರಣಕ್ಕೆ ಒತ್ತು ನೀಡಲಾಗುವುದು ಎಂದು ಶಾಸಕ ಎಸ್.ವಿ.ರಾಮಚಂದ್ರ ತಿಳಿಸಿದರು.

ಪಟ್ಟಣದ ರಾಮಾಲಯ ರಸ್ತೆಯಲ್ಲಿ ಹೈಮಾಸ್ಟ್ ದೀಪ ಲೋಕಾರ್ಪಣೆಗೆ ಚಾಲನೆ ನೀಡಿ, ಅವರು ಮಾತನಾಡಿದರು.

ಪಟ್ಟಣದ 18 ವಾರ್ಡ್‌ಗಳಿಗೆ ತಲಾ ಒಂದರಂತೆ, ಪ್ರವಾಸಿ ಮಂದಿರ, ವಾಲ್ಮೀಕಿ ಭವನ,ಚಳ್ಳಕೆರೆ ರಸ್ತೆ ಪಾರ್ಕ್, ಸ್ಟೇಡಿಯಂ ಒಳಾಂಗಣದಲ್ಲಿ 3 ಸೇರಿ ಒಂದು ಕೋಟಿ ರೂ. ವೆಚ್ಚದಲ್ಲಿ 27 ದೀಪಗಳನ್ನು ಅಳವಡಿಸಲಾಗಿದ್ದು, ಪಟ್ಟಣ ಬೆಳಕಿನಿಂದ ಸದಾ ಪ್ರಜ್ವಲಿಸಲಿದೆ ಎಂದರು.

ಪಟ್ಟಣ ಪಂಚಾಯಿತಿಯಲ್ಲಿ ಅನುದಾನದ ಕೊರತೆಯಿದ್ದು, ಶೀಘ್ರ ಸರ್ಕಾರದಿಂದ ಎಸ್ ಎಫ್ ಸಿ ಅನುದಾನ ದೊರೆತ ಮರುಕ್ಷಣವೇ ಡ್ರೈನೇಜ್ ಮತ್ತು ವಾಯುವಿಹಾರಕ್ಕೆ ಸುಸಜ್ಜಿತ ಪಾರ್ಕ್ ನಿರ್ಮಾಣ ಮಾಡಲಾಗುವುದು ಪಟ್ಟಣವನ್ನು ಸುಂದರವನ್ನಾಗಿಸುವ ಗುರಿ ಹೊಂದಲಾಗಿದೆ ಎಂದರು.

ಪ.ಪಂ ಅಧ್ಯಕ್ಷ ಎಸ್. ಸಿದ್ದಪ್ಪ, ಉಪಾಧ್ಯಕ್ಷೆ ಮಂಜಮ್ಮ, ಸದಸ್ಯರಾದ ಪಾಪಲಿಂಗಪ್ಪ, ದೇವರಾಜ್, ನಾಮನಿರ್ದೇಶಿತ ಸದಸ್ಯರಾದ ಬಿ.ಪಿ.ಸುಭಾನ್, ರುದ್ರಮುನಿ, ಸಹಾಯಕ ಇಂಜಿನಿಯರ್ ಶಿವಮೂರ್ತಿ, ಕಂದಾಯ ನಿರೀಕ್ಷಕ ಸಂತೋಷ್ ಕುಮಾರ್, ಖಿಫಾಯತ್ ಮುಂತಾದವರು ಇದ್ದರು.


## ಹರಿಹರದಲ್ಲಿ ಕುಸ್ತಿ : ಗೆಲುವಿಗೆ ಸೆಣಸಾಟ



ಹರಿಹರ, ಜ.11- ನಗರದ ಗಾಂಧಿ ಮೈದಾನದಲ್ಲಿ ನಡೆಯುತ್ತಿರುವ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಗೆಲುವಿಗಾಗಿ ಸಣಸಾಡುತ್ತಿರುವ ಕುಸ್ತಿ ಪಟುಗಳು. ಈ ವೇಳೆ ಕಾಗಿನೆಲೆ ಕನಕ ಗುರು ಪೀಠದ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಸ್ವಾಮಿಗಳು ತಡರಾತ್ರಿವರೆಗೆ ಕುಸ್ತಿ ವೀಕ್ಷಿಸಿ ಕ್ರೀಡಾ ಪಟುಗಳಿಗೆ ಪ್ರೋತ್ಸಾಹಿಸಿದರು.

ತಾ. ಕುಸ್ತಿ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್, ಪೈಲ್ವಾನ್ ಅಣ್ಣಯ್ಯಪ್ಪ, ಪೈಲ್ವಾನ್ ಸುರೇಶ್ ಚಂದಪೂರ್, ಪೈಲ್ವಾನ್ ರೇವಣಪ್ಪ, ಜಗದೀಶ್ ಚೂರಿ, ಪೈಲ್ವಾನ್ ಆಸೀಫ್, ನಗರಸಭೆ ಮಾಜಿ ಅಧ್ಯಕ್ಷ ರೇವಣಸಿದ್ದಪ್ಪ, ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್ ಹಾಜರಿದ್ದರು.

## ನಗರದ ಶ್ರೀ ವಿಠಲ ಮಂದಿರದಲ್ಲಿ ನಾಳೆ 'ವೈಕುಂಠ ಏಕಾದಶಿ'



ದಾವಣಗೆರೆ, ಜ.11-ಮಹಾರಾಜ ಪೇಟೆಯಲ್ಲಿರುವ ಶ್ರೀ ಭಾವಸಾರ ಕ್ಷತ್ರಿಯ ದೈವ ಮಂಡಳಿ 'ವ' ಭಜನಾ ಮಂಡಳಿ ವಿಠ್ಠಲ ಮಂದಿರ ನಾಡಿದ್ದು ದಿನಾಂಕ 13 ಗುರುವಾರ ವೈಕುಂಠ ಏಕಾದಶಿ ಆಚರಿಸಲಾಗುವುದು.

ಅಂದು ಬೆಳಿಗ್ಗೆ 5 ರಿಂದ ಶ್ರೀ ವಿಠ್ಠಲ ರುಕ್ಮಿಣಿ ದೇವರಿಗೆ ಅಭಿಷೇಕ, ಕಾಕಡಾರತಿ, ಭಜನೆ, ಹರಿಪಾಠ ನಡೆಯುವುದು. ಬೆಳಿಗ್ಗೆ 8 ರಿಂದ ಶ್ರೀ ಗೀತಾ ಜ್ಞಾನೇಶ್ವರಿ ಸಾಮೂಹಿಕ (ಭಗವದ್ಗೀತೆ) ಗ್ರಂಥ ಪಾರಾಯಣ, ಶ್ರೀ ವಿಠ್ಠಲ ರುಕ್ಮಿಣಿ ದೇವರ ಪಾದ ದರ್ಶನವನ್ನು ಭಕ್ತಾದಿಗಳಿಗೆ ಏರ್ಪಡಿಸಲಾಗಿದೆ.

ಅಂದು ಸಂಜೆ 5 ಗಂಟೆಗೆ ಮಹಿಳಾ ಮಂಡಳಿಯವರಿಂದ ಭಜನೆ ಕಾರ್ಯಕ್ರಮ ನಡೆಯಲಿದೆ. ರಾತ್ರಿ 7 ಗಂಟೆಗೆ ಶ್ರೀ ಹ.ಭ.ಪ ತುಕಾರಾಮ ಪವಾರ್ ಸಾ. (ಕೊಲ್ಲಾಪುರ) ಇವರಿಂದ ಕೀರ್ತನೆ ನಡೆಯಲಿದೆ.

ಈ ಎಲ್ಲಾ ಕಾರ್ಯಕ್ರಮಗಳು ಭಜನಾ ಮಂಡಳಿ ಮತ್ತು ತರುಣ ಮಂಡಳಿ ನೇತೃತ್ವದಲ್ಲಿ ಹಾಗೂ ದೈವ ಮಂಡಳಿ ಕಲಾವತಿ ಮಹಿಳಾ ಮಂಡಳಿ, ರುಖುಮಾಯಿ ಮಹಿಳಾ ಮಂಡಳಿ, ಭಾವಸಾರ ವಿಜನ್ ಇಂಡಿಯಾ, ದುರ್ಗಾದೇವಿ ಮಹಿಳಾ ಮಂಡಳಿ, ವಧು-ವರ ಮಾಹಿತಿ ಕೇಂದ್ರ ಇವರ ಸಹಯೋಗದೊಂದಿಗೆ ನಡೆಯಲಿವೆ ಎಂದು ಭಜನಾ ಮಂಡಳಿ ಅಧ್ಯಕ್ಷ ನಿಂಗಸ್ವಾಮಿರಾವ್ ಖಮಿತ್ಕರ್ ತಿಳಿಸಿದ್ದಾರೆ.

# ಪೌರತ್ವ ಪಡೆದು, ದೇಶ ಸೇವೆ ಏಕೆ ಮಾಡಬಾರದು ?

## ಭಾರತೀಯರಷ್ಟೇ ಶುಲ್ಕ ವಿಧಿಸಿ ಎಂದ ಅನಿವಾಸಿ ವಿದ್ಯಾರ್ಥಿಗಳಿಗೆ ಸುಪ್ರೀಂ ಪ್ರಶ್ನೆ

ನವದೆಹಲಿ, ಜ. 11 – ಭಾರತೀಯ ಪೌರರಿಗೆ ವಿಧಿಸುವ ಐ.ಐ.ಟಿ. ಶುಲ್ಕವನ್ನೇ ತಮಗೂ ವಿಧಿಸಬೇಕು ಎಂದು ಅನಿವಾಸಿ ಭಾರತೀಯ ವಿದ್ಯಾರ್ಥಿಯೋರ್ವ ದಾಖಲಿಸಿದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, 'ಭಾರತದ ಪೌರತ್ವ ಪಡೆದು ಈ ದೇಶದ ಸೇವೆ ಏಕೆ ಮಾಡಬಾರದು?' ಎಂದು ಪ್ರಶ್ನಿಸಿದೆ.

ನ್ಯಾಯಮೂರ್ತಿಗಳಾದ ಎಸ್.ಎ. ನಜೀರ್ ಹಾಗೂ ಕೃಷ್ಣಮೂರ್ತಿ ಅವರನ್ನು ಒಳಗೊಂಡ ಪೀಠ ವಿಚಾರಣೆ ನಡೆಸುತ್ತಿದ್ದು, ಈ ವಿಷಯದ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಕಳಿಸಿದೆ.

ವಿಚಾರಣೆ ವೇಳೆ ವಿದ್ಯಾರ್ಥಿಯ ಅರ್ಜಿಯ ಕುರಿತು ಟಿಪ್ಪಣಿ ಮಾಡಿದ ನ್ಯಾಯಾಲಯ, ಸಮಸ್ಯೆ ಎಂದರೆ ನೀನು ಎರಡೂ ರೀತಿಯ ಲಾಭ ಬಯಸುತ್ತಿದ್ದೀಯ. ಇಲ್ಲಿ ಓದಲು ಹಾಗೂ ನಂತರ ವಿದೇಶಕ್ಕೆ ಹಾರಲು ಬಯಸುತ್ತಿದ್ದೀಯ. ಇದರ ಬದಲು ಭಾರತದ ಪೌರತ್ವ ಪಡೆದು ಇಲ್ಲೇ ಸೇವೆ ಮಾಡಬಾರದೇಕೆ? ಎಂದು ಕೇಳಿತು.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ಈ ಪ್ರಕರಣದ ವಿಷಯ ವ್ಯಾಪಕವಾಗಿದೆ. ಭಾರತೀಯ ವಿದ್ಯಾರ್ಥಿಗಳನ್ನು ಅನುಚಿತವಾಗಿ ನಡೆಸಿಕೊಳ್ಳಬಾರದು ಎಂದರು.

ಐ.ಐ.ಟಿ. ಮದ್ರಾಸ್ ಅನಿವಾಸಿ ಭಾರತೀಯರನ್ನು ವಿದೇಶಿಯರೆಂದು ಪರಿಗಣಿಸುತ್ತಿದೆ. ಇದು ಸೂಕ್ತ ನಿಲುವಲ್ಲ ಎಂದು ಸುಪ್ರೀಂ ಕೋರ್ಟ್‌ನಲ್ಲಿ ದಾಖಲಿಸಿರುವ ಅರ್ಜಿಯಲ್ಲಿ ಹೇಳಲಾಗಿದೆ.

ಅನಿವಾಸಿ ಭಾರತೀಯರು ವೀಸಾ ರಹಿತ ಪ್ರಯಾಣದ ಸೌಲಭ್ಯಹೊಂದಿರುತ್ತಾರೆ. ಅವರಿಗೆ ವಿದೇಶಿ ನಾಗರಿಕರಿಗೆ ಲಭ್ಯವಿಲ್ಲದ ಸವಲತ್ತುಗಳು ಸಿಗುತ್ತವೆ.

## ಬೊಮ್ಮಾಯಿ ಆರೋಗ್ಯ ವಿಚಾರಿಸಿದ ಮೋದಿ

ಬೆಂಗಳೂರು ಜ. 11- ಕೋವಿಡ್ ಸೋಂಕಿನಿಂದ ಬಳಲುತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಗ್ಯವನ್ನು ಪ್ರಧಾನಿ ನರೇಂದ್ರ ಮೋದಿ ವಿಚಾರಿಸಿದ್ದಾರೆ.

ಮುಖ್ಯಮಂತ್ರಿಗಳ ಜತೆ ವಿಡಿಯೋ ಸಂವಾದ ನಡೆಸುವ ಮುನ್ನ ಬೊಮ್ಮಾಯಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿದ ಪ್ರಧಾನಿ, ಆರೋಗ್ಯ ವಿಚಾರಿಸಿದ್ದಲ್ಲದೆ ಸೂಕ್ತ ಚಿಕಿತ್ಸೆ ಪಡೆಯಿರಿ ಎಂದು ಸಲಹೆ ಮಾಡಿದರು.

ಸುಮಾರು ಐದು ನಿಮಿಷಗಳ ಕಾಲ ಮಾತುಕತೆ ನಡೆಸಿದ ಪ್ರಧಾನಿಯವರು ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ತಮಗೆ ಕೋವಿಡ್ ಪಾಸಿಟೀವ್ ಆಗಿರುವ ವಿಷಯ ತಿಳಿಸಿದರು.

ನನಗಷ್ಟೇ ಅಲ್ಲದೆ, ತಮ್ಮ ಜತೆ ಕುಟುಂಬದ ಇತರೆ ಇಬ್ಬರಿಗೂ ಸೋಂಕು ತಗುಲಿದೆ ಎಂದಬುದನ್ನು ಪ್ರಧಾನಿಗೆ ತಿಳಿಸಿದರು.

## ಕೂಡಲಸಂಗಮ ದೇವಾ ವಚನಾಂಕಿತಕ್ಕೆ ನಗರದ ಬಸವ ಬಳಗ ನಿರ್ಣಯ

ದಾವಣಗೆರೆ, ಜ.11- ಬಸವ ಬಳಗದ ಸರ್ವ ಸದಸ್ಯರ ಸಭೆಯಲ್ಲಿ ಬಸವ ಧರ್ಮಪೀಠ ಕೂಡಲಸಂಗಮ ಅಧ್ಯಕ್ಷರಾದ ಜಗದ್ಗುರು ಗಂಗಾ ಮಾತಾಜಿಯವರು ಈ ಹಿಂದೆ ಜಗದ್ಗುರು ಲಿಂಗೈಕ್ಯ ಮಾತೆ ಮಹಾದೇವಿ ತಾಯಿಯವರು ತೆಗೆದುಕೊಂಡ ನಿರ್ಣಯದಂತೆ 'ಕೂಡಲ ಸಂಗಮ ದೇವಾ' ಎಂಬ ವಚನಾಂಕಿತವನ್ನು ಬಸವ ಧರ್ಮ ಪೀಠದ ಎಲ್ಲ ಕಾರ್ಯಕ್ರಮ ಹಾಗೂ ಪ್ರಕಟಣೆಗಳಲ್ಲಿ ಬಳಸುವುದಾಗಿ ಐತಿಹಾಸಿಕ ನಿರ್ಣಯವನ್ನು ತೆಗೆದುಕೊಂಡಿದ್ದನ್ನು ಸ್ವಾಗತಿಸಿ, ಅವರ ನಿರ್ಧಾರವನ್ನು ಅನುಮೋದಿಸಲಾಯಿತು.

ಈ ಪೀಠದಿಂದ ಬೆಳೆದುಬಂದ ಶತಾಯುಷಿ ವಿ. ಸಿದ್ದರಾಮ ಶರಣರು, ಮಾತೆ ವಾಗ್ದೇವಿ ತಾಯಿಯವರು, ಬಳಗದ ಅಧ್ಯಕ್ಷ ಎ.ಎಚ್. ಹುಚ್ಚಪ್ಪ ಗುರುಗಳು ಮುಂತಾದ ನಾಡಿನ ಹಲವಾರು ಬಸವ ತತ್ವ ಹಾಗೂ ಲಿಂಗಾಯತ ಧರ್ಮ ಪ್ರಚಾರಕರು ಬಸವ ಧರ್ಮ ಪೀಠದ ಮಹಾನ್ ಉದ್ದೇಶ ಹಾಗೂ ಕಾರ್ಯಗಳಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ಸರಬರಾಜು ಇಲ್ಲ

ಎಸ್.ಎಸ್. ಲೇ ಔಟ್ 'ಎ' ಬ್ಲಾಕ್, ಎಸಿಬಿ ಕಚೇರಿ ರಸ್ತೆ, ಅಂಗವಿಕಲ ಸ್ಕೂಲ್, ಕರ್ನಾಟಕ ಬ್ಯಾಂಕ್ ಸುತ್ತಮುತ್ತ ಬೆಳಿಗ್ಗೆ 10 ರಿಂದ ಮಧ್ಯಾಹ್ನ 4 ರವರೆಗೆ ವಿದ್ಯುತ್ ಇರುವುದಿಲ್ಲ.

## ನಗರದಲ್ಲಿ ಇಂದಿನ ಪುರಾಣ - ಪ್ರವಚನದಲ್ಲಿ ಮದುವೆ ಕಾರ್ಯಕ್ರಮ



ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದ ಆವರಣದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಡೆಯುತ್ತಿರುವ ಒಂದು ತಿಂಗಳ ಪರ್ಯಂತದ ಮುಗುಳಖೋಡದ ಶ್ರೀ ಯಲ್ಲಾಲಿಂಗೇಶ್ವರ ಘನ ಲೀಲಾಮೃತ ಪುರಾಣ ಪ್ರವಚನದಲ್ಲಿ ಇಂದು ಮದುವೆ ಕಾರ್ಯಕ್ರಮ ಜರುಗಲಿದೆ.

ರಾಣೇಬೆನ್ನೂರಿನ ಸಂಜೀವಿನಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ. ಪ್ರಭುಲಿಂಗ ಕೊಡದ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸುವರು.ಪ್ರವಚನ ಪ್ರವೀಣ ಶ್ರೀ ತೋಟೇಂದ್ರ ಶಾಸ್ತ್ರಿಗಳು (ಅಬ್ಬೆ - ತುಮಕೂರು) ಈ ಪ್ರವಚನವನ್ನು ನಡೆಸಿಕೊಡುತ್ತಿದ್ದು, ಭಕ್ತಾದಿಗಳು, ಸಾರ್ವಜನಿಕರು ಭಾಗವಹಿಸುವಂತೆ ಕಾರ್ಯಕ್ರಮದ ಸಂಚಾಲಕ ಅಜ್ಜಂಪುರ ಶೆಟ್ರು ಮೃತ್ಯುಂಜಯ ತಿಳಿಸಿದ್ದಾರೆ.

## ಮಲೇಬೆನ್ನೂರಿನಲ್ಲಿ ಮುಂಚೂಣಿ ಕಾರ್ಯಕರ್ತರಿಗೆ ಬೂಸ್ಟರ್



ಮಲೇಬೆನ್ನೂರು, ಜ.11- ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕೊರೊನಾ ವಿರುದ್ಧ ಹೋರಾಟ ಮಾಡುವ ಮುಂಚೂಣಿ ಕಾರ್ಯಕರ್ತರಿಗೆ ಬೂಸ್ಟರ್ ಡೋಸ್ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಈ ವೇಳೆ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ, ಡಾ. ನಿಸಾರ್ ಸೇರಿದಂತೆ ಆರೋಗ್ಯ ಕೇಂದ್ರದ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತರು ಬೂಸ್ಟರ್ ಡೋಸ್ ಲಸಿಕೆ ಪಡೆದುಕೊಂಡರು.

ಸಮುದಾಯ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಸದ್ಯ 95 ಜನರಿಗೆ ಲಸಿಕೆ ನೀಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೂ ಬೂಸ್ಟರ್ ಡೋಸ್ ಹಾಕಲಾಗುವು ದೆಂದು ಜಿಲ್ಲಾ ಆರೋಗ್ಯ ಮೇಲ್ವಿಚಾರಣಾಧಿಕಾರಿ ಎಂ.ವಿ. ಹೊರಕೇರಿ ತಿಳಿಸಿದರು.

ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ, ಹಿರಿಯ ಪ್ರಾಥಮಿಕ ಸುರಕ್ಷಣಾಧಿಕಾರಿ ಸುಧಾ ಸುಲಾಕೆ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

## ವಿನೋಬನಗರ ಸರ್ಕಾರಿ ಶಾಲೆಗೆ ನೀರು ಹೊತ್ತು ತರುವ ಪೋಷಕರು



ದಾವಣಗೆರೆ, ಜ.11- ಇಲ್ಲಿನ ವಿನೋಬನಗರ ಮೂರನೇ ಮುಖ್ಯ ರಸ್ತೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಕುಡಿಯುವ ನೀರು ಇಲ್ಲದ ಪರಿಣಾಮ ಪೋಷಕರೇ ಕೊಡಪಾನದ ಮೂಲಕ ಶಾಲೆಗೆ ನೀರು ಹೊತ್ತು ತಂದು ಕೊಡುತ್ತಿದ್ದಾರೆ.

ಹಲವು ದಿನಗಳಿಂದ ಶಾಲೆಯಲ್ಲಿ ನೀರಿನ ತೊಂದರೆಯಾಗಿದ್ದು, ಮಹಾನಗರ ಪಾಲಿಕೆ ವತಿಯಿಂದ ಯಾವುದೇ ನೀರಿನ ಸಂಪರ್ಕವಿಲ್ಲ. ಈ ಬಗ್ಗೆ ನಗರಾಭಿವೃದ್ಧಿ ಸಚಿವರಿಗೂ, ಪಾಲಿಕೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಸ್ಪಂದಿಸಿಲ್ಲ ಎಂದು ಪೋಷಕರು ಆರೋಪಿಸಿದ್ದಾರೆ.

ಇದೀಗ ಶಾಲೆಯಲ್ಲಿ ಮಕ್ಕಳಿಗಾಗಿ ಅಡುಗೆ ಮಾಡಲು ಹಾಗೂ ಕುಡಿಯುವ ನೀರಿಗಾಗಿ ಎಸ್.ಡಿ.ಎಂ.ಸಿ. ಸಮಿತಿಯವರು ಹಾಗೂ ಪೋಷಕರೇ ನಿತ್ಯ ಬೇರೆ ಕಡೆಯಿಂದ ನೀರು ಹೊತ್ತು ತಂದು ಸಹಕರಿಸುತ್ತಿದ್ದಾರೆ. ಮಂದಾದರೂ ಸಂಬಂಧಪಟ್ಟ ಜನಪ್ರತಿನಿಧಿಗಳು, ಅಧಿಕಾರಿಗಳು ಇತ್ತ ಗಮನ ಹರಿಸಲಿ. ಸರ್ಕಾರಿ ಶಾಲೆ ಎಂದು ಉದಾಸೀನ ಮಾಡುವುದು ಬೇಡ ಎಂದು ಪೋಷಕರು ಒತ್ತಾಯಿಸಿದ್ದಾರೆ.

## ಎಸ್ಸೆಸ್ - ಎಸ್ಸೆಸ್ಸೆಂ ಸಹಯೋಗದಲ್ಲಿ ಎಂಸಿಸಿ 'ಬಿ' ಬ್ಲಾಕ್ ನಲ್ಲಿ ಬೂಸ್ಟರ್ ಲಸಿಕೆ



ದಾವಣಗೆರೆ, ಜ. 11- ಮಹಾನಗರ ಪಾಲಿಕೆಯ 38 ನೇ ವಾರ್ಡ್‌ನ ಎಂಸಿಸಿ ಬಿ ಬ್ಲಾಕ್ ನ ಸ್ವಿಮ್ಮಿಂಗ್ ಫೂಲ್ ಆವರಣದಲ್ಲಿ ಕೊರೊನಾ ಎರಡು ಡೋಸ್ ಲಸಿಕೆ ಪಡೆದ ಸುಮಾರು 300 ಜನರಿಗೆ ಇಂದು ಬೂಸ್ಟರ್ ನೀಡಲಾಯಿತು.

### ಇಂದೂ ಮುಂದುವರಿಕೆ

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಸಹಯೋಗದೊಂದಿಗೆ 38ನೇ ವಾರ್ಡ್‌ನ ಮಹಾನಗರ ಪಾಲಿಕೆಯ ಸದಸ್ಯ ಜಿ.ಎಸ್. ಗಡಿಗುಡಾಳ್ ಮಂಜುನಾಥ್ ಅವರ ನೇತೃತ್ವದಲ್ಲಿ ಈ ಲಸಿಕೆ ನೀಡಲಾಯಿತು.

60 ವರ್ಷ ಮೇಲ್ಪಟ್ಟವರು, ಅಸ್ವಸ್ಥರಾಗಿರುವವರು ಹಾಗೂ ಈಗಾಗಲೇ 2 ನೇ ಡೋಸ್ ಪಡೆದು 9 ತಿಂಗಳು ಆದವರಿಗೆ ಕೋವಿಡ್ -19 ಮುನ್ನೆಚ್ಚರಿಕೆ ಲಸಿಕೆ ಬೂಸ್ಟರ್ ಡೋಸ್ ಕೊಡಲಾಗುತ್ತಿದೆ. ಎಸ್‌ಎಸ್‌ಐಎಂಎಸ್ ಪ್ರಾಂಶುಪಾಲ ಬಿ.ಜಿ. ಪ್ರಸಾದ್ ಅವರು ಲಸಿಕಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಮೊದಲ ಹಾಗೂ ಎರಡನೇ ಡೋಸ್ ಕೋವಿಶೀಲ್ಡ್ ಪಡೆದಿದ್ದಲ್ಲಿ ಈಗ ಬೂಸ್ಟರ್ ಡೋಸ್ ಕೂಡ ಕಡ್ಡಾಯವಾಗಿ ಕೋವಿಶೀಲ್ಡ್ ಅನ್ನೇ ಪಡೆಯತಕ್ಕದ್ದು. ಇದೇ ಮಾದರಿ ಕೋವ್ಯಾಕ್ಸಿನ್ ಗೂ ಅನ್ವಯವಾಗುತ್ತದೆ.

**ನಾಳೆಯೂ ಬೂಸ್ಟರ್ :** ಇಂದು ಮೂರು ನೂರು ಜನರು ಬಂದು ಈಗಾಗಲೇ ಲಸಿಕೆ ಪಡೆದಿದ್ದಾರೆ. ನಾಳೆಯೂ ಸಹ ಈ ಕಾರ್ಯಕ್ರಮ ಮುಂದುವರಿಯಲಿದೆ. ಜನರು ಇಲ್ಲಿಗೆ ಬಂದು ಲಸಿಕೆ ಪಡೆಯಬಹುದು ಎಂದು ಗಡಿಗುಡಾಳ್ ಮಂಜುನಾಥ್ ತಿಳಿಸಿದ್ದಾರೆ.

## ಹರಿಹರೇಶ್ವರ ದೇವಸ್ಥಾನದಲ್ಲಿ 12 ಲಕ್ಷಕ್ಕೂ ಅಧಿಕ ಹಣ ಸಂಗ್ರಹ



ಹರಿಹರ, ಜ.11- ನಗರದ ಪ್ರಸಿದ್ಧ ಐತಿಹಾಸಿಕ ಶ್ರೀ ಹರಿಹರೇಶ್ವರ ಮತ್ತು ಲಕ್ಷ್ಮೀ ದೇವಿಯ ಹುಂಡಿಯ ಹಣವನ್ನು ಇಂದು ಎಣಿಕೆಯನ್ನು ಗ್ರೇಡ್2 ತಹಶೀಲ್ದಾರ್ ಶಶಿಧರ್ ಮತ್ತು ಮುಜರಾಯಿ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ಮಾಡಲಾಗಿದ್ದು, ಶ್ರೀ ಹರಿಹರೇಶ್ವರ ದೇವಾಲಯದ ಹುಂಡಿಯಿಂದ 10, 58,377 ರೂಪಾಯಿ ಮತ್ತು ಶ್ರೀ ಲಕ್ಷ್ಮೀ ದೇವಾಲಯದಿಂದ 145,018 ರೂಪಾಯಿ ಸೇರಿದಂತೆ ಒಟ್ಟು12,03405 ಸಂಗ್ರಹವಾಗಿದೆ.

ಈ ಸಂದರ್ಭದಲ್ಲಿ ತಾಲ್ಲೂಕು ಆಡಳಿತದ ಸಿಬ್ಬಂದಿಗಳಾದ ಸಂಗೀತ ಜೋಷಿ, ನರಸಮ್ಮ, ಉಮೇಶ್, ಬೇಬಿ, ಇತರರು ಹಾಜರಿದ್ದರು.

## ತಪೋಕ್ಷೇತ್ರ ಕಣ್ವಕುಪ್ಪೆಯಲ್ಲಿ ಸಂಕ್ರಾಂತಿ ಹಬ್ಬ ಸರಳವಾಗಿ ಆಚರಣೆ



ಜಗಳೂರು, ಜ.11- ತಾಲ್ಲೂಕಿನ ತಪೋಕ್ಷೇತ್ರ ಕಣ್ವಕುಪ್ಪೆ ಗವಿಮಠದಲ್ಲಿ ಈ ಬಾರಿ ಮಕರ ಸಂಕ್ರಾಂತಿ ಮತ್ತು ಶ್ರೀ ಮುಮ್ಮಡಿ ಶಾಂತಲಿಂಗ ಶಿವಾಚಾರ್ಯರ ರಥೋತ್ಸವವನ್ನು ಕೋವಿಡ್ ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಗವಿಮಠದ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಪ್ರತಿವರ್ಷದ ಆಚರಣೆಯಂತೆ ಈ ಬಾರಿಯೂ ಗವಿಮಠದಲ್ಲಿ ಇದೇ ದಿನಾಂಕ 15 ರ ಶನಿವಾರ ಮತ್ತು 16ರ ಭಾನುವಾರ ನಡೆಯಬೇಕಿದ್ದ ಧಾರ್ಮಿಕ ಅಚರಣೆ ಮತ್ತು ಸಾಂಪ್ರದಾಯಿಕ ಕಾರ್ಯಕ್ರಮಗಳನ್ನು ಕೋವಿಡ್ ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ಮಾತ್ರ ಅಚರಿಸಲಾಗುತ್ತದೆ. ಭಕ್ತರು ತಮ್ಮ ತಮ್ಮ ಗ್ರಾಮ, ಮನೆಗಳಲ್ಲಿಯೇ ಸರಳವಾಗಿ ಸಂಕ್ರಾಂತಿ ಆಚರಿಸಿಕೊಂಡು, ಮುಮ್ಮಡಿ ಶ್ರೀಗಳನ್ನು ಮನಗಳಲ್ಲಿಯೆ ಸ್ಮರಿಸಿಕೊಂಡು ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತೆ ಶ್ರೀಗಳು ಸಲಹೆ ನೀಡಿದ್ದಾರೆ.

MEGPLY™
Trusted Ply For Strong Future
CLASSIC MR 303
NEEM BWR 303
GOLD 710
CLUB 710
WPC
PREMIUM QUALITY Best CHOICE PREMIUM QUALITY
Authorised Dist:
Samruddhi Ply & Hardware
Hadadi Road, Opp Vani Rice Mill
Davangere - 577004
Ph: 9980339333, 7676055550

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte